ಇದೇ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಹಾಗೂ ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಗಳು ಸಲ್ಲಿಸಿದ ಅಫಿಡೆವಿಟ್ ಮೇರೆಗೆ ಈ ವಿಶ್ವವಿದ್ಯಾಲಯದಲ್ಲಿ ಮೌಲ್ಡರ್ ಎಂದು ಸೇವೆ ಸಲ್ಲಿಸಿ ನಿವೃತ್ತರಾದ ಶ್ರೀ.ಎಸ್.ಜಿ. ಕುಡಚಿಮಠ ಇವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ ರಿ.ಅ.ಸಂ.30280/2008 ರ ಮೇರೆಗೆ ಸದರಿಯವರ ವೇತನ ಶ್ರೇಣಿ ಬದಲಾಯಿಸಲಾಗಿರುತ್ತದೆ. ಈಗಾಗಲೇ ಸರ್ಕಾರವು ಈ ವಿಶ್ವವಿದ್ಯಾಲಯದ ಹಂತದಲ್ಲಿಯೇ ಅಗತ್ಯ ಕ್ರಮ ಕೈಗೊಳ್ಳಬಹುದಾಗಿದೆಂದು ತಿಳಿಸಿರುತ್ತಾರೆ. ಅದರಂತೆ ಮೈಸೂರು ವಿಶ್ವವಿದ್ಯಾಲಯದಲ್ಲಿ ಕರಡುವಾಚಕರಿಗೆ ವೇತನ ಶ್ರೇಣಿ ನೀಡಿದಂತೆ ಅವರಿಗೂ ಸಹ ಸದರ ವೇತನ ಶ್ರೇಣಿ ನೀಡಲು ವಿನಂತಿಸಿರುತ್ತಾರೆ.

ಕರ್ನಾಟಕ ಸರ್ಕಾರವು ರಾಜ್ಯದಲ್ಲಿರುವ ವಿಶ್ವವಿದ್ಯಾಲಯಗಳಲ್ಲಿ ಆಯಾ ಹುದ್ದೆಗಳಿಗೆ ಸಂಬಂಧಿಸಿದಂತೆ ವೇತನ ಶ್ರೇಣಿ ನಿಗದಿಪಡಿಸಲು ವರದಿ ಸಲ್ಲಿಸಲು ರಚಿಸಿದ ಮುದ್ದಪ್ಪ ಸಮಿತಿಯು ಸಲ್ಲಿಸಿದ ವರದಿಯ ಮೇರೆಗೆ 1977 ರಲ್ಲಿ ವಿಶ್ವವಿದ್ಯಾಲಗಳಲ್ಲಿ ವೇತನ ಶ್ರೇಣಿ ಜಾರಿಗೊಳಿಸಿರುತ್ತದೆ. ಅದರಂತೆ ಈ ವಿಶ್ವವಿದ್ಯಾಲಯದಲ್ಲಿಯೂ ವೇತನ ಶ್ರೇಣಿಗಳು ಜಾರಿಯಲ್ಲಿರುತ್ತವೆ. ಅದರಂತೆ ಸದರಿಯವರಿಗೆ ವೇತನ ಶ್ರೇಣಿ ರೂ.14550-26700 (2012 ರ ಪರಿಷ್ಕೃತ ವೇತನ ಶ್ರೇಣಿ) ನೀಡಲಾಗಿರುತ್ತದೆ. ಶ್ರೀ.ಎಸ್.ಜಿ. ಕುಡಚಿಮಠ ಇವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ ರಿ.ಅ.ಸಂ.30280/2008 ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ ಸಿವಿಲ್ ಅಪೀಲ್ ನಂ.1216-1256/2003 ರಲ್ಲಿ ಶ್ರೀ.ಕೆ.ಟಿ. ವೀರಪ್ಪ ಹಾಗೂ ಇತರರು ವಿರುದ್ಧ ಸರ್ಕಾರ, ಈ ಪ್ರಕರಣದಲ್ಲಿನ ತೀರ್ಪಿನ ಪ್ರಕಾರ ಉನ್ನತ ಶಿಕ್ಷಣ ಇಲಾಖೆ ಕಾರ್ಯದರ್ಶಿಗಳು ಪ್ರಮಾಣ ಪತ್ರವನ್ನು ಸಲ್ಲಿಸಿದ್ದರಿಂದ ಅದರಂತೆ ನ್ಯಾಯಾಲಯದ ಆದೇಶದ ಮೇರೆಗೆ ಶ್ರೀ.ಎಸ್.ಜಿ. ಕುಡಚಿಮಠ ಇವರಿಗೆ ವೇತನ ಶ್ರೇಣಿಯನ್ನು ಈ ವಿಶ್ವವಿದ್ಯಾಲಯದ ಪರೀಧಿಯಲ್ಲಿ ಬದಲಿಸಿ ಆದೇಶ ಹೊರಡಿಸಿರುತ್ತದೆ.

ಸದರ ವಿಷಯವನ್ನು ಪರಿಶೀಲನೆಗಾಗಿ ದಿನಾಂಕ: 2-7-2016 ರಂದು ಜರುಗಿದ ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲಾಗಿ ಸಭೆಯು ತನ್ನ ನಿರ್ಣಯ ನಂ.16 ರಲ್ಲಿ, ಡಾ.ಸಿದ್ದಪ್ಪ ಎಸ್. ಕರಡು ವಾಚಕ ಇವರಿಗೆ ಮೈಸೂರು ವಿಶ್ವವಿದ್ಯಾಲಯದಲ್ಲಿ ನೀಡಿದಂತೆ ವೇತನ ಶ್ರೇಣಿಯನ್ನು ಮಂಜೂರು ಮಾಡುವ ಕುರಿತು ಪರಿನಿಯಮಗಳನ್ನು (Statute) ತಯಾರಿಸಿ ಸರ್ಕಾರದ ಅನುಮೋದನೆಗೆ ಕಳುಹಿಸಬೇಕೆಂದು ನಿರ್ಣಯಿಸಿರುತ್ತದೆ. ಅದರಂತೆ ಅನುಶಾಸನ ಈ ಕೆಳಗಿನಂತಿರುತ್ತದೆ.

"ಪ್ರಸಾರಾಂಗ ವಿಭಾಗದಲ್ಲಿನ ಕರಡು ವಾಚಕ (ಪದವೀಧರ) ಹುದ್ದೆಗೆ ಈಗ ಇರುವ ವೇತನ ಶ್ರೇಣಿ ಬದಲಾಗಿ ಮೈಸೂರು ವಿಶ್ವವಿದ್ಯಾಲಯದಲ್ಲಿರುವಂತೆ ವೇತನ ಶ್ರೇಣಿ ನಿಗದಿಪಡಿಸುವ ಅನುಶಾಸನ.

1. ಶಿರೋನಾಮೆ ಹಾಗೂ ಪ್ರಾರಂಭ:

ಪ್ರಸಾರಾಂಗ ವಿಭಾಗದಲ್ಲಿನ ಕರಡು ವಾಚಕ (ಪದವೀಧರ) ಹುದ್ದೆಗೆ ಈಗ ಇರುವ ವೇತನ ಶ್ರೇಣಿ ಬದಲಾಗಿ ಮೈಸೂರು ವಿಶ್ವವಿದ್ಯಾಲಯದಲ್ಲಿರುವಂತೆ ವೇತನ ಶ್ರೇಣಿ ನಿಗದಿಪಡಿಸುವ ಅನುಶಾಸನ.

2. ವಿವರ ಹಾಗೂ ವೇತನ ಶ್ರೇಣಿ:

1977 ರ ಮುದ್ದಪ್ಪ ಸಮಿತಿ ಶಿಫಾರಸ್ಸಿನ ವೇತನ ಶ್ರೇಣಿಯನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು ರದ್ದು ಪಡಿಸಿದ್ದು ಹೊಸ ವೇತನ ಶ್ರೇಣಿಯನ್ನು ಮೈಸೂರು ವಿಶ್ವವಿದ್ಯಾಲಯ ಜಾರಿಗೆ ತಂದಿರುತ್ತದೆ. ರಾಜ್ಯದಲ್ಲಿರುವ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಕರಡು ವಾಚಕರ ವೇತನ ಶ್ರೇಣಿ ಈ ಕೆಳಗಿನಂತಿರುತ್ತದೆ.

1) ಬೆಂಗಳೂರು ವಿಶ್ವವಿದ್ಯಾಲಯ- ರೂ.8825-16000 2) ಮುಕ್ತ ವಿಶ್ವವಿದ್ಯಾಲಯ ಮೈಸೂರು - ರೂ.8000-14800
3) ಮೈಸೂರು ವಿಶ್ವವಿದ್ಯಾಲಯ- ರೂ.10000-14000 4) ಕರ್ನಾಟಕ ವಿಶ್ವವಿದ್ಯಾಲಯ - ರೂ.7275-13350

ಮು.ಪು.ನೋ...

ಉನ್ನತ ಶಿಕ್ಷಣ ಇಲಾಖೆ ಕಾರ್ಯದರ್ಶಿಗಳಿಗೆ ವೇತನ ಶ್ರೇಣಿಗೆ ಸಂಬಂಧಿಸಿದಂತೆ ಸ್ಪಷ್ಟೀಕರಣ ಕೇಳಿದ್ದಕ್ಕೆ ತಮ್ಮ ಪತ್ರ ದಿನಾಂಕ 6-6-2015 ಹಾಗೂ 12-2-2016 ರ ಮೂಲಕ, ಈ ಕೆಳಗೆ ಕಾಣಿಸಿದಂತೆ ತಿಳಿಸಿರುತ್ತಾರೆ.

"The pay scale and qualification required for particular post in any University is determined as per the (C&R) statute of that University, which is approved by the Chancellor. ಆದರಂತೆ ತಮ್ಮಲ್ಲಿ ಪರಿನಿಯಮಗಳಿದ್ದರೆ ಡಾ.ಎನ್. ಸಿದ್ದಪ್ಪ ಕರಡು ವಾಚಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ವೇತನ ಶ್ರೇಣಿ ನಿಗದಿ ಮಾಡುವ ಕುರಿತು ತಮ್ಮ ಹಂತದಲ್ಲಿಯೇ ಅಗತ್ಯ ಕ್ರಮ ಕೈಗೊಳ್ಳಬಹುದಾಗಿದೆಯೆಂದು ತಮಗೆ ತಿಳಿಸಲು ನಾನು ನಿರ್ದೇಶಿತನಾಗಿದ್ದೇನೆ."

ಶ್ರೀ.ಎಸ್.ಜಿ. ಕುಡಚಿಮಠ ಇವರು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ದಾಖಲಿಸಿದ ರಿ.ಅ.ಸಂ.30280/2008 ರಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ದಾಖಲಿಸಿದ ಸಿವಿಲ್ ಅಪೀಲ್ ನಂ.1216-1256/2003 ರಲ್ಲಿ ಶ್ರೀ.ಕೆ.ಟಿ. ವೀರಪ್ಪ ಹಾಗೂ ಇತರರು ವಿರುದ್ಧ ಸರ್ಕಾರ, ಈ ಪ್ರಕರಣದಲ್ಲಿನ ತೀರ್ಪಿನ ಪ್ರಕಾರ ಉನ್ನತ ಶಿಕ್ಷಣ ಇಲಾಖೆ ಕಾರ್ಯದರ್ಶಿಗಳು ಪ್ರಮಾಣ ಪತ್ರವನ್ನು ಸಲ್ಲಿಸಿದ್ದರಿಂದ ಅದರಂತೆ ನ್ಯಾಯಾಲಯದ ಆದೇಶದ ಮೇರೆಗೆ ಶ್ರೀ.ಎಸ್.ಜಿ. ಕುಡಚಿಮಠ ಇವರಿಗೆ ವೇತನ ಶ್ರೇಣಿಯನ್ನು ಈ ವಿಶ್ವವಿದ್ಯಾಲಯದ ಪರಿಧಿಯಲ್ಲಿ ಬದಲಿಸಿ ಆದೇಶ ಹೊರಡಿಸಿರುತ್ತದೆ. ಕ.ರಾ.ವಿ. ಕಾಯ್ದೆ 2000-15(5) ಪ್ಯಾರಾ 3 ರ ಪ್ರಕಾರ ವಿಶ್ವವಿದ್ಯಾಲಯವು ತನ್ನ ನೌಕರರ ವೇತನ ಶ್ರೇಣಿಯನ್ನು ಪರಿಷ್ಕರಿಸುವ ಅಧಿಕಾರ ಹೊಂದಿರುವುದಿಲ್ಲ.

ಪ್ರಸಾರಾಂಗ ವಿಭಾಗದಲ್ಲಿನ ಕರಡು ವಾಚಕ (ಪದವೀಧರ) ಹುದ್ದೆಗೆ ಈಗ ಇರುವ ವೇತನ ಶ್ರೇಣಿ ರೂ.14550-26700 (2012 ರ ಪರಿಷ್ಕೃತ ವೇತನ ಶ್ರೇಣಿ) ಬದಲಾಗಿ ಮೈಸೂರು ವಿಶ್ವವಿದ್ಯಾಲಯದಲ್ಲಿರುವಂತೆ ವೇತನ ಶ್ರೇಣಿ ರೂ.20000-28000 (2012 ರ ಪರಿಷ್ಕೃತ ವೇತನ ಶ್ರೇಣಿ) ನಿಗದಿಪಡಿಸುವದು."

ಕಾರಣ ಮೇಲ್ಕಾಣಿಸಿದ ಸಿಂಡಿಕೇಟ ನಿರ್ಣಯದ ಮೇರೆಗೆ, ಪ್ರಸಾರಾಂಗ ವಿಭಾಗದಲ್ಲಿನ ಕರಡು ವಾಚಕ (ಪದವೀಧರ) ಹುದ್ದೆಗೆ ಈಗ ಇರುವ ವೇತನ ಶ್ರೇಣಿ ಬದಲಾಗಿ ಮೈಸೂರು ವಿಶ್ವವಿದ್ಯಾಲಯದಲ್ಲಿರುವಂತೆ ವೇತನ ಶ್ರೇಣಿ ನಿಗದಿಪಡಿಸುವ ಕರಡು ಅನುಶಾಸನವನ್ನು ತಯಾರಿಸಿ ದಿನಾಂಕ 17-9-2016 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯ ಮುಂದೆ ಪರಿಶೀಲನೆಗಾಗಿ ಮಂಡಿಸಲಾಗಿ ಸಭೆಯು ತನ್ನ ನಿರ್ಣಯ ನಂ.17 ರಲ್ಲಿ ಈ ಕುರಿತು ಸರ್ಕಾರಕ್ಕೆ ಪತ್ರ ಬರೆಯಲು ತಿರ್ಮಾನಿಸಿದ್ದನ್ನು ಮರುಪರಿಶೀಲಿಸಲು ದಿನಾಂಕ: 3-12-2016 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯ ಮುಂದೆ ಮಂಡಿಸಲಾಗಿ ಸಭೆಯು ತನ್ನ ನಿರ್ಣಯ ನಂ. 6 ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿರುತ್ತದೆ.

"ಕರ್ನಾಟಕ ವಿಶ್ವವಿದ್ಯಾಲಯದಲ್ಲಿಯ ಕರಡುವಾಚಕ ಹುದ್ದೆಗೆ ಮೈಸೂರು ವಿಶ್ವವಿದ್ಯಾಲಯದಲ್ಲಿ ನೀಡಿದ ವೇತನ ಶ್ರೇಣಿಯನ್ನು ವಿಸ್ತರಿಸುವಂತೆ ಕರಡು ಅನುಶಾಸನವನ್ನು ಸಿದ್ಧಪಡಿಸಬೇಕೆಂದು ವಿದ್ಯಾವಿಷಯದ ಪರಿಷತ್ ತೀರ್ಮಾನಿಸಿತು".

ಮೇಲ್ಕಾಣಿಸಿದ ನಿರ್ಣಯವನ್ನು ದಿನಾಂಕ 18.02.2017 ರಂದು ಜರುಗಿದ ಸಿಂಡಿಕೇಟ ಸಭೆಯ ಮುಂದೆ ಮಂಡಿಸಲಾಗಿ ಸಭೆಯು ತನ್ನ ನಿರ್ಣಯ ನಂ. 13 ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿರುತ್ತದೆ.

"ವಿಶ್ವವಿದ್ಯಾಲಯದಲ್ಲಿರುವ ಪ್ರಸಾರಾಂಗ ವಿಭಾಗದಲ್ಲಿನ ಕರಡು ವಾಚಕರ (ಪದವೀಧರ) ಹುದ್ದೆಗೆ ಈಗ ಇರುವ ವೇತನ ಶ್ರೇಣಿ ಬದಲಾಗಿ ಮೈಸೂರು ವಿಶ್ವವಿದ್ಯಾಲಯದಲ್ಲಿ ನೀಡಿದಂತೆ ವೇತನ ಶ್ರೇಣಿಯನ್ನು ನೀಡುವ ಸಲುವಾಗಿ ತಯಾರಿಸಿದ ಕರಡು ಅನುಶಾಸನವನ್ನು ಸರ್ಕಾರದ ಒಪ್ಪಿಗೆಗಾಗಿ ಕಳುಹಿಸಿಕೊಡಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು."

ಮೇಲ್ಕಾಣಿಸಿದ ನಿರ್ಣಯವನ್ನು ದಿನಾಂಕ 25.3.2017 ರಂದು ಜರುಗಿದ ಹಣಕಾಸು ಸಮಿತಿ ಸಭೆಯ ಮುಂದೆ ಮಂಡಿಸಲಾಗಿ ಸಭೆಯು ತನ್ನ ನಿರ್ಣಯ ನಂ. 4 ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿರುತ್ತದೆ.

"ಡಾ.ಸಿದ್ದಪ್ಪ ಎನ್ ಕರಡು ವಾಚಕರು ಪ್ರಸಾರಾಂಗ ಇವರಿಗೆ ಮೈಸೂರು ವಿಶ್ವವಿದ್ಯಾಲಯದಲ್ಲಿ ನೀಡಿದಂತೆ ವೇತನ ಶ್ರೇಣಿಯನ್ನು ನೀಡುವ ಬಗ್ಗೆ ಕರಡು ಅನುಶಾಸನ ರಚಿಸುವ ವಿಷಯವನ್ನು ಪರಿಶೀಲಿಸಿ ಸಿಂಡಿಕೇಟ್ ಸಭೆಗೆ ಮಂಡಿಸಲು ಸೂಚಿಸಲಾಯಿತು."

ಮೇಲ್ಕಾಣಿಸಿದ ನಿರ್ಣಯವನ್ನು ದಿನಾಂಕ 18.05.2017 ರಂದು ಜರುಗಿದ ಆಡಳಿತ ಮಂಡಳಿಯ ಸಭೆಯ ಮುಂದೆ ಮಂಡಿಸಲಾಗಿ ಸಭೆಯು ತನ್ನ ನಿರ್ಣಯ ನಂ. 18 ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿರುತ್ತದೆ.

"ಡಾ.ಸಿದ್ದಪ್ಪ ಎನ್ ಕರಡು ವಾಚಕರು ಪ್ರಸಾರಾಂಗ ಇವರಿಗೆ ಮೈಸೂರು ವಿಶ್ವವಿದ್ಯಾಲಯದಲ್ಲಿ ನೀಡಿದಂತೆ ವೇತನ ಶ್ರೇಣಿಯನ್ನು ನೀಡುವ ಬಗ್ಗೆ ಕರಡು ಅನುಶಾಸನವನ್ನು ಸಿಂಡಿಕೇಟ ಅನುಮೋದಿಸಿತು. ಮುಂದುವರೆದು, ಸದರಿ ಅನುಶಾಸನವನ್ನು ಸರ್ಕಾರದ ಅನುಮೋದನೆಗೆ ಕಳುಹಿಸಿಕೊಡಬೇಕೆಂದು ತೀರ್ಮಾನಿಸಿತು."

ಆದ್ದರಿಂದ, ಮೇಲ್ಕಾಣಿಸಿದ ನಿರ್ಣಯದ ಅನುಸಾರ, ಸದರಿ ಅನುಶಾಸನವನ್ನು ಮೇಲಿನ ವಿದ್ಯಾವಿಷಯಕ, ಹಣಕಾಸು, ಆಡಳಿತ ಮಂಡಳಿ ಸಭೆಯ ಅನುಮೋದನೆಯೊಂದಿಗೆ ಕಚೇರಿ ಪತ್ರ ನಂ.2191 ದಿನಾಂಕ.11.11.2017 ರಂದು ಘನತೆವೆತ್ತ ರಾಜ್ಯಪಾಲರ ಅಂಕಿತ ಪಡೆಯಲು ಉನ್ನತ ಶಿಕ್ಷಣ ಇಲಾಖೆಗೆ ಕಳುಹಿಸಲಾಗುವ, ಕನ್ನಡ ಹಾಗೂ ಇಂಗ್ಲೀಷ್ ಅವತರಣಿಕೆಯ ತಲಾ ಕರಡು ಅನುಶಾಸನದ ಮೂರು ಪ್ರತಿಗಳನ್ನು ಕಳುಹಿಸಿಕೊಡಲಾಗಿತ್ತು. ನಂತರ ಸರ್ಕಾರವು ಕಾಲ ಕಾಲಕ್ಕೆ ಕೋರಿರುವ ಮಾಹಿತಿಯನ್ನು ವಿಶ್ವವಿದ್ಯಾಲಯವು ನೀಡುತ್ತಾ ಬಂದಿರುತ್ತದೆ.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರು ತಮ್ಮ ಪತ್ರ ದಿನಾಂಕ.21.11.2019 ರ ಮೂಲಕ ಡಾ. ಸಿದ್ದಪ್ಪ ಎನ್, ಕರಡು ವಾಚಕರು, ಪ್ರಸಾರಾಂಗ, ಕವಿವಿ ಇವರಿಗೆ ಮೈಸೂರು ವಿಶ್ವವಿದ್ಯಾಲಯದಲ್ಲಿ ನೀಡಿದಂತೆ ವೇತನ ಶ್ರೇಣಿಯನ್ನು ನೀಡುವ ಸಂಬಂಧ ಕರಡು ಪರಿನಿಯಮಗಳನ್ನು ಸಿದ್ಧಪಡಿಸಿ ಅನುಶಾಸನ ರಚಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದ್ದ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಗಿನಂತೆ ನಿರ್ದೇಶನ ನೀಡಿರುವರು.

ಮು.ಪು.ನೋ...

A) ಮೈಸೂರು ವಿಶ್ವವಿದ್ಯಾಲಯದ ಉದ್ಯೋಗಿಗಳು ರಾಜ್ಯ ಸರ್ಕಾರದ ವೇತನ ಶ್ರೇಣಿಗಳನ್ನು ಮಂಜೂರು ಮಾಡುವಂತೆ ಮಾನ್ಯ ಉಚ್ಚ ನ್ಯಾಯಾಯಲಯದಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿ ಸಂಖ್ಯೆ.11755/-4 ಸಿ/ಡಬ್ಲ್ಯೂ 3400-3423/93, 37901/92, 35996/92, 3426-3443/93 ಇವುಗಳಲ್ಲಿ ದಿನಾಂಕ.28.10.1998 ರಂದು ನೀಡಿದ ತೀರ್ಪನ್ನು ಮಾನ್ಯ ಉಚ್ಚ ನ್ಯಾಯಾಯಲಯವು ಸದ ಎತ್ತಿಹಿಡಿದಿದ್ದು, ಅದರಂತೆ ಸದರಿ ವಿಶ್ವವಿದ್ಯಾಲಯದ ಎಲ್ಲಾ ವೃಂದದ ವೇತನ ಶ್ರೇಣಿಗಳನ್ನು ಪರಿಷ್ಕರಿಸಲಾಗಿದೆ. ಆದುದರಿಂದ ಈ ಮಾನದಂಡವನ್ನು ಇತರೆ ವಿಶ್ವವಿದ್ಯಾಲಯಗಳಿಗೆ ಅಳವಡಿಸಲು ಸಾಧ್ಯವಿಲ್ಲ.

B) ಮುಂದುವರೆದು ಶ್ರೀ ಸಿದ್ದಪ್ಪ ಇವರು ಈ ಹಿಂದೆ ಮೈಸೂರು ಮುಕ್ತ ವಿಶ್ವವಿದ್ಯಾಲಯದಲ್ಲಿ ಕರ್ತವ್ಯ ನಿರ್ವಹಿಸಿದ್ದು, ಈ ಹುದ್ದೆಗೆ ರಾಜಿನಾಮೆ ನೀಡಿ ಹೆಚ್ಚಿನ ವೇತನ ಶ್ರೇಣಿಯಿಂದ ಕಡಿಮೆ ವೇತನ ಶ್ರೇಣಿಗೆ ನೇಮಕ ಹೊಂದಿರುವುದರಿಂದ ಹಿಂದಿನ ವೇತನ ಶ್ರೇಣಿ ಕೂಡ ಪರಿಗಣಿಸಲು ಕೆ.ಸಿ.ಎಸ್.ಆರ್ ನಿಯಮ 41-ಎ(i) ರ ಅವಕಾಶಗಳನ್ವಯ ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

C) ಈ ಹಿನ್ನೆಲೆಯಲ್ಲಿ ಸಂಬಂಧಿಸಿದ ವಿಶ್ವವಿದ್ಯಾಲಯಗಳಲ್ಲಿನ ಪರಿನಿಯಮಗಳಲ್ಲಿ (ವೃಂದ ಮತ್ತು ನೇಮಕಾತಿ ಪರಿನಿಯಮ) ಲಭ್ಯವಿರುವ ವೇತನ ಶ್ರೇಣಿಗಳನ್ನು ಮಾತ್ರ ಅಳವಡಿಸಿಕೊಳ್ಳುವ ಅವಕಾಶವಿದ್ದು, ಕರಡುವಾಚಕರ ಹುದ್ದೆಯ ವೇತನ ಶ್ರೇಣಿಗೆ ಮಾತ್ರ ಸ್ಟ್ಯಾಟುಟ್ ತಿದ್ದುಪಡಿ ಮಾಡುವುದು ಸಮಂಜಸವಾಗುವುದಿಲ್ಲ. ಆದುದರಿಂದ ಶ್ರೀ.ಸಿದ್ದಪ್ಪ ಕರಡುವಾಚಕರು ಇವರಿಗೆ ಹೆಚ್ಚಿನ ವೇತನ ಶ್ರೇಣಿ ಮಂಜೂರು ಮಾಡುವ ಪ್ರಸ್ತಾವನೆಯನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ತಿಳಿಸಿರುವರು.

***ಇಲ್ಲಿ ಮತ್ತೊಂದು ಅಂಶವೇನೆಂದರೆ, ಮೈಸೂರು ವಿಶ್ವವಿದ್ಯಾಲಯವು ತನ್ನ ಸಿಬ್ಬಂದಿಗಳಿಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ಅನುಸಾರವಾಗಿ ಜಾರಿ ಮಾಡಿದ ವೇತನ ಶ್ರೇಣಿ ಪರಿಷ್ಕರಣೆಯನ್ನು ಅನುಶಾಸನಕ್ಕೆ ಘನತೆವೆತ್ತ ಕುಲಾಧಿಪತಿಗಳ ಅನುಮೋದನೆಯನ್ನು ನಿರೀಕ್ಷೆಯಲ್ಲಿರಿಸಿ ಜಾರಿ ಮಾಡಲಾಗಿರುತ್ತದೆ.*** ಅಂದರೆ, ವೇತನ ಪರಿಷ್ಕರಣೆಗೆ ಮೈಸೂರು ವಿಶ್ವವಿದ್ಯಾಲಯ ರಚಿಸಿದ ಅನುಶಾಸನಕ್ಕೆ ಘನತೆವೆತ್ತ ಕುಲಾಧಿಪತಿಗಳ ಅನುಮೋದನೆ ದೊರೆತಿರುವ ಬಗ್ಗೆ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಯಾವುದೇ ಮಾಹಿತಿ ಇರುವುದಿಲ್ಲ. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಬೆಂಗಳೂರು ಇವರು ತಮ್ಮ ದಿನಾಂಕ 21.11.2019 ರಲ್ಲಿ ಸೂಚಿಸಿದಂತೆ ಮೈಸೂರು ವಿಶ್ವವಿದ್ಯಾಲಯದಲ್ಲಿ ನೀಡಿದಂತೆ ಕವಿವಿಯಲ್ಲಿ ವೇತನ ಶ್ರೇಣಿಯನ್ನು ನೀಡುವ ಸಂಬಂಧ ಕರಡು ಪರಿನಿಯಮಗಳನ್ನು ಸಿದ್ಧಪಡಿಸಿ ಅನುಶಾಸನ ರಚಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದ್ದ ಪ್ರಸ್ತಾವನೆಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಬೆಂಗಳೂರು ಇವರು ಪರಿಗಣಿಸಲು ಸಾಧ್ಯವಿಲ್ಲವೆಂದು ತಿಳಿಸಿರುವ ಮಾಹಿತಿಯನ್ನು ಡಾ.ಸಿದ್ದಪ್ಪ ಎನ್, ಕರಡು ವಾಚಕರು, ಪ್ರಸಾರಾಂಗ, ಕವಿವಿ ಧಾರವಾಡ ಇವರಿಗೆ ಕಚೇರಿ ಪತ್ರ ನಂ.4406 ದಿನಾಂಕ.23.12.2019 ರ ಮೂಲಕ ತಿಳಿಸಲಾಗಿರುತ್ತದೆ.

ಆದ್ದರಿಂದ, ಡಾ.ಸಿದ್ದಪ್ಪ ಎನ್. ಕರಡು ವಾಚಕರು, ಪ್ರಸಾರಾಂಗ ಇವರು ದಿನಾಂಕ 20.05.2020 ರ ಮನವಿಯಲ್ಲಿ ಕರಡುವಾಚಕ ಹುದ್ದೆ ವೇತನ ಶ್ರೇಣಿಯನ್ನು ನೀಡುವಂತೆ ತಿಳಿಸಿದ್ದು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000 ರ ಕಂಡಿಕೆ 41-(5)(6) ರ ಪ್ರಕಾರ ವಿಶ್ವವಿದ್ಯಾಲಯ ರಚಿಸಿದ ಅನುಶಾಸನ ತಿರಸ್ಕರಿಸಲು ಸರ್ಕಾರಕ್ಕೆ ಅವಕಾಶವಿರುವುದಿಲ್ಲವೆಂದು ತಿಳಿಸಿದ್ದಾರೆ. ಹಾಗೂ ಸದರಿಯವರು ತಮ್ಮ ಮನವಿಯೊಂದಿಗೆ ಲಗತ್ತಿಸಿದ ಸೇವಾ ಕಾನೂನು ಸಲಹೆಗಳು ಇದರಲ್ಲಿ ಇರುವ ಅಂಶಗಳು ಕೆಳಗಿನಂತೆ ಇರುತ್ತದೆ.

"ಇನ್ನು ಭಾರತದ ಸರ್ವೋಚ್ಚ ನ್ಯಾಯಾಲಯದ ಆದೇಶದ ಬಗ್ಗೆ ಸಂವಿಧಾನದ ವಿಧಿ 141 ಅತೀ ಸ್ಪಷ್ಟವಾಗಿ ಲಕ್ಷ್ಮಣ ರೇಖೆಯನ್ನು ಗೊತ್ತು ಮಾಡಿರುತ್ತದೆ. ಸರ್ವೋಚ್ಚ ನ್ಯಾಯಾಲಯದ ಆದೇಶ ಕಾನೂನಾಗಿರುತ್ತದೆ ಎಂಬುದು ಹಾಗೂ ಆ ಕಾನೂನನ್ನು ಆ ರೀತಿಯ ಪ್ರತಿಯೊಂದು ಪ್ರಕರಣದಲ್ಲಿಯೂ ಪರಿಪಾಲಿಸಬೇಕು ಎನ್ನುವಂತಹ ವಿಧಿ ಇದೆ ಎಂದು ಎಲ್ಲರೂ ಮನಗಾಣಬೇಕು. ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ನಮ್ಮ ಇಡೀ ರಾಷ್ಟ್ರದ ಪ್ರಾಧಿಕಾರಗಳು ಪಾಲನೆ ಮಾಡಲೇಬೇಕಾದ ವಿಷಯ. ಇತ್ತೀಚಿಗೆ ನ್ಯಾಯಾಲಯವೊಂದು ಈ ಬಗ್ಗೆ ವಿಶ್ಲೇಷಣೆ ನೀಡುತ್ತಾ ಒಂದು ರಾಜ್ಯದಲ್ಲಿ ಒಬ್ಬ ಸರ್ಕಾರಿ ನೌಕರ ಸರ್ವೋಚ್ಚ ನ್ಯಾಯಾಲಯದಿಂದ ಆದೇಶ ತಂದು ಪ್ರತಿಫಲ ಪಡೆದಾಗ ಅದು ಅನುಕೂಲವಾಗಿ ಪರಿಣಮಿಸುವುದರಿಂದ ಮತ್ತೊಂದು ರಾಜ್ಯದಲ್ಲಿ ಅದೇ ಸಂದರ್ಭದಲ್ಲಿ ಇದ್ದಂತಹ ಸರ್ಕಾರಿ ನೌಕರನು ತನ್ನ ಮೇಲಿನ ಪ್ರಾಧಿಕಾರವನ್ನು ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ತನಗೂ ಸೇವಾ ಪ್ರತಿಫಲ ನೀಡಬೇಕೆಂದು ಕೋರಿದಾಗ ಆ ಕೋರಿಕೆ ತಿರಸ್ಕೃತವಾದಲ್ಲಿ ಸರ್ವೋಚ್ಚ ನ್ಯಾಯಾಲಯದ ನಿಂದನೆ ಆಗಿದೆ ಎಂದು ತಿಳಿಯಬೇಕೆಂದು ಕೂಡ ಆದೇಶಿಸುತ್ತದೆ.

ಹೀಗಾಗಿ ಮನಬಂದಂತೆ ಆದೇಶಿಸುವ ಪ್ರಾಧಿಕಾರಿಗಳ ಮೇಲೆ ನ್ಯಾಯಾಲಯಗಳು ಒಂದು ರೀತಿ ಕಡಿವಾಣ ಹಾಕಿದೆ ಎಂದರೆ ತಪ್ಪಾಗಲಾರದು. ನ್ಯಾಯಾಲಯಗಳ ಆದೇಶಕ್ಕೆ ಬೆಲೆ, ಪುರಸ್ಕಾರ ನೀಡಬೇಕಾದದು ಪ್ರತಿಯೊಬ್ಬ ಪ್ರಜೆ, ಪ್ರಾಧಿಕಾರ ಹಾಗೂ ಸರ್ಕಾರಗಳ ಕರ್ತವ್ಯ ಎಂದು ಇಲ್ಲಿ ತಿಳಿಯಬೇಕಾಗುತ್ತದೆ"

ಅದೇ ರೀತಿಯಲ್ಲಿ ಡಾ. ಎನ್. ಸಿದ್ದಪ್ಪ, ಇವರು ತಮ್ಮ ಮನವಿಯಲ್ಲಿ ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ಹಾಗೂ ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಗಳು ಸಲ್ಲಿಸಿದ ಅಫಿಡವಿಟ್ ಮೇರೆಗೆ ಈ ವಿಶ್ವವಿದ್ಯಾಲಯದಲ್ಲಿ ಪೌಲ್ಟರ್ ಎಂದು ಸೇವೆ ಸಲ್ಲಿಸಿ ನಿವೃತ್ತರಾದ ಶ್ರೀ.ಎಸ್.ಜಿ. ಕುಡಚಿಮಠ ಇವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ ರಿ.ಅ.ಸಂ.30280/2008 ರ ಮೇರೆಗೆ ಅವರ ಪ್ರಕರಣಕ್ಕೆ ಮಾತ್ರ ಸೀಮಿತಗೊಳಿಸಿ ಸರ್ಕಾರದ ನಿರ್ದೇಶನದಂತೆ ವೇತನ ಶ್ರೇಣಿ ಬದಲಾಯಿಸಲಾಗಿರುವ ಅಂಶವನ್ನು ದಿನಾಂಕ.27.06.2020 ರಂದು ಆಡಳಿತ ಮಂಡಳಿಯ ಸಭೆಯ ಪರಿಶೀಲನೆಗಾಗಿ ಮಂಡಿಸಿದಾಗ, ಠರಾವು ನಂ.12 ರಲ್ಲಿ ಈ ಕೆಳಗಿನಂತೆ ನಿರ್ಣಯವನ್ನು ತೆಗೆದುಕೊಂಡಿರುತ್ತದೆ.

"ಡಾ.ಸಿದ್ದಪ್ಪ ಎನ್. ಕರಡು ವಾಚಕರು, ಪ್ರಸಾರಂಗ ಕವಿವಿ ಇವರಿಗೆ ಮೈಸೂರು ಮುಕ್ತ ವಿಶ್ವವಿದ್ಯಾಲಯದಲ್ಲಿ ನೀಡಿದ ವೇತನ ಶ್ರೇಣಿಯನ್ನು ನಿಗದಿಪಡಿಸುವ ಕುರಿತಾಗಿ ಆಡಳಿತ ಮಂಡಳಿಯಲ್ಲಿ ಪ್ರಸ್ತಾಪಿಸಲಾಯಿತು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕುಲಸಚಿವರು (ಆಡಳಿತ) ಇವರು ಸಭೆಗೆ ವಿವರಿಸಿದರು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸುಧೀರ್ಘವಾಗಿ ಚರ್ಚಿಸಿ, ಈ ವಿಷಯದ ಬಗ್ಗೆ ಕಾನೂನು ಕೋಶದ ಅಭಿಪ್ರಾಯವನ್ನು ಪಡೆದು ಮುಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದೆಂದು ಸಭೆಯು ನಿರ್ಧರಿಸಿತು."

ಮು.ಪು.ನೋ...

ಮೇಲ್ಕಾಣಿಸಿದ ಆಡಳಿತ ಮಂಡಳಿಯ ನಿರ್ಣಯದ ಅನುಸಾರ ಕಾನೂನು ಸಲಹೆಗಾರರು ದಿನಾಂಕ.09.09.2020 ರಂದು ಪ್ಯಾರಾ ನಂ.457 ರಲ್ಲಿ ಈ ಕೆಳಗಿನಂತೆ ತಮ್ಮ ಅಭಿಪ್ರಾಯವನ್ನು ಸೂಚಿಸಿರುವರು.

"The reading of law by the Applicant Siddappa at Sl. (II) of Para NO.441 *(ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶಗಳು ಭಾರತದಲ್ಲಿ ಕಾನೂನಾಗಿ ಪರಿಗಣಿಸಲ್ಪಟ್ಟಿರುತ್ತದೆ. ಅಲ್ಲದೇ ಹಲವಾರು ಪ್ರಕರಣದಲ್ಲಿ ಈ ಕಾನೂನಿನ ಆದೇಶದ ಮೇಲೆ ಕ್ರಮ ಜರುಗಿಸಲು ಕೂಡ ಹೇಳುತ್ತದೆ. ಪ್ರಕಟಿತ ಕಾನೂನು ಇದ್ದಾಗ್ಯೂ ಕೂಡ ಮೂಲ ವೇತನ ಶ್ರೇಣಿಯನ್ನು ಬದಲಾಯಿಸಿರುವುದಿಲ್ಲ ಎಂಬುದನ್ನು ತಮ್ಮ ಸಾನಿಧ್ಯಕ್ಕೆ ತರಬಯಸುತ್ತೇನೆ)* above, appears to be unsustainable in law, Being a layman, hard to expect him to know the ratio decidendi, and obiteur dicta, and as to how to read the judgements. As already stated, doctrine of Precedent is not applicable to this case, since those judgement are all judgements in personum. Not being judgements in rem, they cannot be made applicable to the circumstances set out by the Applicant. Hence, in the facts and circumstances of this case, it is opined that, that Application dt.20.05.2020 of the Applicant does not merit any consideration. Hence may be rejected"

ಆದ್ದರಿಂದ, ಡಾ.ಸಿದ್ದಪ್ಪ ಎನ್., ಕರಡು ವಾಚಕರು, ಪ್ರಸಾರಾಂಗ ಇವರು ತಮ್ಮ ಪತ್ರ ದಿನಾಂಕ 20.05.2020 ರ ಮನವಿಯ ಮೂಲಕ ಕರ್ನಾಟಕ ವಿಶ್ವವಿದ್ಯಾಲಯದ ಕರಡುವಾಚಕ ಹುದ್ದೆ ವೇತನ ಶ್ರೇಣಿಯನ್ನು ಮೈಸೂರು ವಿಶ್ವವಿದ್ಯಾಲಯದ ಕರಡುವಾಚಕರ ಹುದ್ದೆಗೆ ಸಮಗೊಳಿಸಿ ಬದಲಾಯಿಸಲು ಕೋರಿರುವ ವಿಷಯದ ಕುರಿತಾಗಿ ದಿನಾಂಕ.27.06.2020 ರಂದು ಆಡಳಿತ ಮಂಡಳಿಯ ಸಭೆಯು ಠರಾವು ನಂ.12 ರಲ್ಲಿ ತೆಗೆದುಕೊಂಡ ನಿರ್ಣಯದಂತೆ ಕಾನೂನು ಅಭಿಪ್ರಾಯವನ್ನು ಆಡಳಿತ ಮಂಡಳಿ ಸಭೆಯ ಮುಂದೆ ಪರಿಶೀಲನೆಗಾಗಿ ಮಂಡಿಸಲಾಗಿದೆ.

## ಸಿಂಡಿಕೇಟ್ ಸಭೆಯ ಕಲಂ

06) ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸೇವಾ ಸಕ್ರಮಾತಿಗೊಂಡ 64 ಜನ ಸಿಬ್ಬಂದಿಗಳ ಪೈಕಿ ಅರ್ಹತಾ ದಿನಾಂಕದಿಂದ ಕಿರಿಯ ಸಹಾಯಕ ಹುದ್ದೆಗೆ ಪದೋನ್ನತಿ ಕೋರಿದ ಕೆಲ ಸಿಬ್ಬಂದಿಗಳು ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯ, ಧಾರವಾಡ ಪೀಠದಲ್ಲಿ ದಾಖಲಿಸಿದ ರಿಟ್ ಅರ್ಜಿಗಳಲ್ಲಿ ದಿನಾಂಕ: 03.03.2023 ರಂದು ಮಾನ್ಯ ಉಚ್ಚ ನ್ಯಾಯಾಲಯವು ನೀಡಿದ ಆದೇಶದ ಅನುಷ್ಠಾನದ ಕುರಿತು ರಚಿಸಲಾದ ಸಮಿತಿ ಸಲ್ಲಿಸಿರುವ ವರದಿಯ ವಿಷಯವಾಗಿ ಸಿಂಡಿಕೇಟ ಸಭೆಯ ಪರಿಶೀಲನೆ ಕುರಿತು.

ಪ್ರಸ್ತಾವನೆ :

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎಮ್.ಆರ್.ಇ/ಎನ್.ಎಮ್.ಆರ್/ತಾಸಿನ ತುಂಡು ಗುತ್ತಿಗೆ, ಇತ್ಯಾದಿ ತಾತ್ಕಾಲಿಕವಾಗಿ ಸೇವೆ ಸಲ್ಲಿಸುತ್ತಿದ್ದ 64 ಜನ ಸಿಬ್ಬಂದಿಗಳ ಸೇವೆಯನ್ನು ದಿನಾಂಕ : 07.09.2007, 08.12.2007 ಮತ್ತು 05.02.2008 ರಂದು ಹೇಗೆ ಹಂತ ಹಂತವಾಗಿ ಖಾಯಂಗೊಳಿಸಿದ ಕ್ರಮಕ್ಕೆ ಸರ್ಕಾರದಿಂದ ಆಕ್ಷೇಪಣೆ ಉಂಟಾಗಿದ್ದರಿಂದ ಮತ್ತು ಈ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದೊಂದಿಗೆ ಸುಧೀರ್ಘವಾದ ಪತ್ರ ವ್ಯವಹಾರದ ನಂತರ ಸರ್ಕಾರದ ದಿನಾಂಕ : 21.12.2016 ರ ನಿರ್ದೇಶನದ ಅನುಸಾರ ಸಿಂಡಿಕೇಟ ಸಭೆಯ ನಿರ್ಣಯ ಸಂಖ್ಯೆ: 16 ದಿನಾಂಕ : 07.01.2017ರ ಪ್ರಕಾರ 64 ಜನ ನೌಕರರ ಸೇವೆಯನ್ನು ಸಕ್ರಮಗೊಳಿಸಿರುವುದನ್ನು ಕರ್ನಾಟಕ ವಿಶ್ವವಿದ್ಯಾಲಯ ಕ್ರಮಬದ್ಧಗೊಳಿಸಿ ಈ ಕಚೇರಿ ಆದೇಶ ನಂ: 442 ದಿನಾಂಕ : 04.05.2017 ಅನ್ನು ಜಾರಿ ಮಾಡಿದೆ. ಮುಂದುವರೆದು ಈ 64 ಸಿಬ್ಬಂದಿಗಳಲ್ಲಿ ಎಸ್.ಎಸ್.ಎಲ್.ಸಿ ಪಾಸಾಗಿರುವ ಒಟ್ಟು 15 ಗ್ರುಪ್ 'ಡಿ' ದರ್ಜೆ ಸಿಬ್ಬಂದಿಗಳಿಗೆ ದಿನಾಂಕ: 01.08.2018 ರಿಂದ ಕಿರಿಯ ಸಹಾಯಕ ಹುದ್ದೆಗೆ ಪದೋನ್ನತಿ ನೀಡಲಾಗಿರುತ್ತದೆ. ಇದಾದ ನಂತರ ಸೇವಾಸಕ್ರಮಾತಿಗೊಂಡಂತಹ ಸಿಬ್ಬಂದಿಗಳ ಪೈಕಿ ಕೆಲ ಗ್ರುಪ್ 'ಡಿ' ನೌಕರರು ತಾವು 2010 ನೇ ಸಾಲಿನಲ್ಲಿ ಕಿರಿಯ ಸಹಾಯಕ ಹುದ್ದೆಗೆ ಪದೋನ್ನತಿಗೆ ಅರ್ಹರಿರುವುದಾಗಿ ತಿಳಿಸಿ, ಆದ್ದರಿಂದ ಅವರಿಗೆ 2010 ನೇ ಸಾಲಿನಲ್ಲಿ ಪ್ರಾಪ್ತವಾಗಿರುವ ಅರ್ಹತಾ ದಿನಾಂಕದಿಂದ ಕಿರಿಯ ಸಹಾಯಕ ಹುದ್ದೆಗೆ ಪದೋನ್ನತಿ ನೀಡಲು ವಿನಂತಿಸಿಕೊಂಡಿದ್ದು, ಈ ಕುರಿತು ಮೂರು ಸಿಬ್ಬಂದಿಗಳು ರೀಟ್ ಅರ್ಜಿ ಸಂಖ್ಯೆ : 101689/2022, 101787/2022 ಮತ್ತು 101788/2022 ಗಳನ್ನು ದಾಖಲಿಸಿದ್ದು, ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯವು ಸದರಿ ರಿಟ್ ಅರ್ಜಿಗಳಲ್ಲಿ ದಿನಾಂಕ: 03.03.2023 ರಂದು ನೀಡಿದ ಆದೇಶದ ಅನುಸಾರ ಶ್ರೀ ಎಸ್. ಆರ್. ಹಳ್ಳಿ, ಶ್ರೀ ಆರ್. ಎಸ್. ಗಣಾಚಾರಿ ಮತ್ತು ಶ್ರೀ ಆರ್. ಎಸ್. ಲಮಾಣಿ ಇವರಿಗೆ ಅಹವಾಲು ಸಲ್ಲಿಸಲು ತಿಳಿಸಲಾಗಿತ್ತು, ಅದರಂತೆ ಈ ಮೂರು ಜನ ಸಿಬ್ಬಂದಿಗಳು ದಿನಾಂಕ : 14.08.2023 ರಂದು ಮದ್ಯಾಹ್ನ 12 ಘಂಟೆಗೆ ಕುಲಸಚಿವರ ಕಾರ್ಯಾಲಯದಲ್ಲಿ ತಮ್ಮ ಮನವಿಗಳನ್ನು ಸಲ್ಲಿಸಿದ್ದಾರೆ.

ಮುಂದುವರೆದು, ಈ ಮೂರು ಜನ ಸಲ್ಲಿಸಿದ ಅರ್ಜಿಯನ್ನು ಪರಿಶೀಲಿಸಲು ಅಧಿಸೂಚನೆ ನಂ: 933 ದಿನಾಂಕ : 08.08.2023 ರ ಸಮಿತಿಯನ್ನು ರಚಿಸಲಾಗಿದೆ. ಅದರಂತೆ ಸಮಿತಿಯು ಈ ಮೂರು ಜನ ಅರ್ಜಿದಾರರ ಮನವಿಯನ್ನು ಪರಿಶೀಲಿಸಿ ತನ್ನ ವರದಿಯನ್ನು ದಿನಾಂಕ : 17.08.2023 ರಂದು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದೆ.

ಕಾರಣ ಮುಚ್ಚಿದ ಲಕೋಟೆಯಲ್ಲಿರುವ ಸಮಿತಿಯ ವರದಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗಾಗಿ ಮಂಡಿಸಲಾಗಿದೆ.

## ಸಿಂಡಿಕೇಟ್ ಸಭೆಯ ಕಲಂ

07) ಕರ್ನಾಟಕ ವಿಶ್ವವಿದ್ಯಾಲಯದ ಪಬ್ಲಿಕ್ ಶಾಲೆ ಹಾಗೂ ಕ.ವಿ.ವಿ. ಪ್ರಾಥಮಿಕ ಕನ್ನಡ ಶಾಲೆಯಲ್ಲಿನ ಖಾಲಿ ಹುದ್ದೆಗಳ ಭರ್ತಿ ಮಾಡಿಕೊಳ್ಳುವ ವಿಷಯ ಸಹಾಯಕ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಪ್ರಸ್ತಾವನೆಯ ಪರಿಶೀಲನೆ ಕುರಿತು.

ಟಿಪ್ಪಣಿ:

ಕರ್ನಾಟಕ ವಿಶ್ವವಿದ್ಯಾಲಯದ ಪಬ್ಲಿಕ್ ಶಾಲೆ ಹಾಗೂ ಕವಿವಿ ಪ್ರಾಥಮಿಕ ಕನ್ನಡ ಶಾಲೆಗಳಲ್ಲಿ ಖಾಲಿಯಿರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ಕೋರಿ ಪ್ರಸ್ತಾವನೆಯನ್ನು ಉನ್ನತ ಶಿಕ್ಷಣ ಇಲಾಖೆಗೆ ಸಲ್ಲಿಸಲಾಗಿತ್ತು. ಅದರಂತೆ, ಸರ್ಕಾರವು ತನ್ನ ಪತ್ರ ಸಂಖ್ಯೆ. ಇಡಿ 11 ಯುಕೆವಿ 2021 ದಿನಾಂಕ: 11.04.2022 ರ ಮೂಲಕ ಕವಿವಿ ಪಬ್ಲಿಕ್ ಶಾಲೆಗೆ ಒಟ್ಟು 12 ಹುದ್ದೆಗಳನ್ನು (09 ಸಹಾಯಕ ಶಿಕ್ಷಕರು, 01 ಸಂಗೀತ ಶಿಕ್ಷಕರು, 01 ಸಹಾಯಕ ಶಿಕ್ಷಕ ಕಂ ಸಹಾಯಕ ಹೌಸಮಾಸ್ಟರ್, & 01 ಸಹಾಯಕ ಹೌಸಮಾಸ್ಟರ್) ಹಾಗೂ ಪ್ರಾಥಮಿಕ ಕನ್ನಡ ಶಾಲೆಗೆ 02 ಸಹಾಯಕ ಶಿಕ್ಷಕರ ಹುದ್ದೆಗಳನ್ನು ನೇರನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಮೀಸಲಾತಿಯ ಕುರಿತು ತಮ್ಮ ಇಲಾಖೆಯ ಸಹಮತಿ ಪಡೆಯುವ ಷರತ್ತಿಗೊಳಪಟ್ಟು ಅನುಮತಿಯನ್ನು ನೀಡಿದೆ.

ಮೇಲಿನ ಸರ್ಕಾರದ ಪತ್ರದಲ್ಲಿ ನೀಡಿರುವ ನಿರ್ದೇಶನದಂತೆ, ಕವಿವಿ ಪಬ್ಲಿಕ್ ಶಾಲೆ ಹಾಗೂ ಕವಿವಿ ಪ್ರಾಥಮಿಕ ಕನ್ನಡ ಶಾಲೆಯಲ್ಲಿ ಖಾಲಿಯಿರುವ ಸಹಾಯಕ ಶಿಕ್ಷಕರ ಹುದ್ದೆಗಳಿಗೆ ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 01 ಸೇಹಿಮ 2022 ದಿನಾಂಕ: 28.12.2022 ರ ಪ್ರಕಾರ ನೂತನ ರಿಕ್ತ ಸ್ಥಾನಗಳ ಅನುಸಾರ ಲಂಬ ಮೀಸಲಾತಿಯನ್ನು ಹಾಗೂ ಸರ್ಕಾರಿ ಆದೇಶ ಸಂಖ್ಯೆ. ಸಿಆಸುಇ 53 ಸೇನೇನಿ 2007 ದಿನಾಂಕ: 04.01.2008 ರ ಪ್ರಕಾರ ಸಮತಳ ಮೀಸಲಾತಿಯನ್ನು ಹಾಗೂ ಪ್ರಸ್ತುತ ನೇರನೇಮಕಾತಿ ಮಾಡುವಾಗ ರೋಸ್ಟರ್ ಬಿಂದುವನ್ನು 01 ರಿಂದ ಪ್ರಾರಂಭಿಸಲು ದಿನಾಂಕ: 06.03.2023 ರಂದು ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಬೆಂಗಳೂರು ಇವರು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಇವರಿಗೆ ನೀಡಿರುವ ನಿರ್ದೇಶನದ ಹಿನ್ನಲೆಯಲ್ಲಿ ಅವಶ್ಯಕತೆಯಿರುವ ಹುದ್ದೆಗಳನ್ನು ಅವು ಖಾಲಿಯಾದ ಕ್ರಮಾಂಕದಲ್ಲಿರಿಸಿ ಈ ಆಧಾರದ ಮೇಲೆ ಮೀಸಲಾತಿಯನ್ನು (ಲಂಬ ಮತ್ತು ಸಮತಳ ಮೀಸಲಾತಿ ಒಳಗೊಂಡಿದೆ) ಅಳವಡಿಸಿ ಅದರನುಸಾರ ಮೀಸಲಾತಿ ಅನ್ವಯಿಸಿ ವರ್ಗೀಕರಿಸಿ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಮತ್ತು ಆಯುಕ್ತರು, ಹಿಂದುಳಿದ ವರ್ಗಗಳ ಇಲಾಖೆ, ಬೆಂಗಳೂರು ಇವರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು.

ಸರ್ಕಾರದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು, ಇವರು ತಮ್ಮ ಪತ್ರ ಸಂಖ್ಯೆ. BCWD-19014/7/2023-BCWD_GB-BCWD ದಿನಾಂಕ: 15.06.2023 ಹಾಗೂ ಸರ್ಕಾರದ ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರು ತಮ್ಮ ಪತ್ರ ಸಂಖ್ಯೆ. ಸಕನಿ/ಮೀಜಾಕೋ-1/ಸಿಆರ್-56/2018-19 ದಿನಾಂಕ: 05.07.2023 ರ ಪ್ರಕಾರ ಕರ್ನಾಟಕ ವಿಶ್ವವಿದ್ಯಾಲಯವು ಮೀಸಲಾತಿಯನ್ನು ಅಳವಡಿಸಿಕೊಂಡ ಸಲ್ಲಿಸಿದ ಪ್ರಸ್ತಾವನೆಗೆ ಅನುಮೋದನೆಯನ್ನು ನೀಡಿರುತ್ತವೆ.

ಮುಂದುವರೆದು, ಈ ಕುರಿತು ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ನೀಡಿದ ಸರ್ಕಾರದ ಪತ್ರ ದಿನಾಂಕ: 11.04.2022, ಈ ಕುರಿತು ಸಿದ್ದಪಡಿಸಿದ ಕರಡು ಅಧಿಸೂಚನೆ ಹಾಗೂ ಮೀಸಲಾತಿಗೆ ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಒಪ್ಪಿಗೆ ನೀಡಿದ ಪತ್ರಗಳನ್ನು ಲಗತ್ತಿಸಿ ನೇಮಕಾತಿ ಪ್ರಕ್ರಿಯೆಯನ್ನು ನಡೆಸಲು ಘನತೆವೆತ್ತ ಕುಲಾಧಿಪತಿಗಳ ಅನುಮೋದನೆ ಕೋರಿ ದಿನಾಂಕ: 26.07.2023 ರಂದು ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಅದರಂತೆ, ಘನತೆವೆತ್ತ ಕುಲಾಧಿಪತಿಗಳ ಅಧೀನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು ಇವರು ತಮ್ಮ ಪತ್ರ ಸಂಖ್ಯೆ. GS 13 KUM 2023 ದಿನಾಂಕ: 18.08.2023 ರ ಪ್ರಕಾರ ಕರ್ನಾಟಕ ವಿಶ್ವವಿದ್ಯಾಲಯದ ಪಬ್ಲಿಕ್ ಶಾಲೆ ಹಾಗೂ ಕವಿವಿ ಪ್ರಾಥಮಿಕ ಕನ್ನಡ ಶಾಲೆಯಲ್ಲಿ ಖಾಲಿಯಿರುವ ಸಹಾಯಕ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ಕೋರಿದ ಪ್ರಸ್ತಾವನೆಗೆ ಒಪ್ಪಿಗೆ ನೀಡಿರುವುದಾಗಿ ತಿಳಿಸಿದ್ದಾರೆ.

ಆದ್ದರಿಂದ, ಈಗ ಕರ್ನಾಟಕ ವಿಶ್ವವಿದ್ಯಾಲಯದ ಪಬ್ಲಿಕ್ ಶಾಲೆ ಹಾಗೂ ಕವಿವಿ ಪ್ರಾಥಮಿಕ ಕನ್ನಡ ಶಾಲೆಯಲ್ಲಿ ಖಾಲಿಯಿರುವ ಸಹಾಯಕ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮೋದನೆ ದೊರೆತಿರುವ ಹಿನ್ನಲೆಯಲ್ಲಿ ಸದರಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸುವ ವಿಷಯದ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯ ಮುಂದೆ ಪರಿಶೀಲನೆಗಾಗಿ ಮಂಡಿಸಲಾಗಿದೆ.

34

## ಸಿಂಡಿಕೇಟ್ ಸಭೆಗೆ ಕಲಂ

08) ಶ್ರೀಮತಿ ಶೃತಿ ಮಂಜುನಾಥ ಗುಡದೇನಿ ಇವರನ್ನು ಅನುಕಂಪದ ಆಧಾರದ ಮೇಲೆ ಗ್ರೂಪ್ 'ಡಿ' ಹುದ್ದೆಗೆ (ಸಿಪಾಯಿ) ನೇಮಕಾತಿ ಮಾಡುವ ಕುರಿತಾದ ಪ್ರಸ್ತಾವನೆಗೆ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯುವ ಕುರಿತು.

**ಪ್ರಸ್ತಾವನೆ :**

ಶ್ರೀಮತಿ ಶೃತಿ ಮಂಜುನಾಥ ಗುಡದೇನಿ. ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ಬಗ್ಗೆ 4ನೇ ತರಗತಿ ಅಂಕಪಟ್ಟಿಯನ್ನು ಪರಿಶೀಲನೆಗೊಳಪಡಿಸಿ ಹಿಂದಿರಿಗಿಸಲು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಧಾರವಾಡ ಶಹರ, ಧಾರವಾಡ ಇವರಿಗೆ ಪತ್ರ ಸಂಖ್ಯೆ. 638 ದಿನಾಂಕ: 28.06.2023 ರ ಮೂಲಕ ಪತ್ರ ಬರೆಯಲಾಗಿತ್ತು. ಹಾಗೂ ಮುಖ್ಯೋಪಾಧ್ಯಾಯರು, ಬಾಸೆಲ್ ಮಿಶನ್ ಹೆಣ್ಣುಮಕ್ಕಳ ಪ್ರೌಢ ಶಾಲೆ, ಹೆಡ್‌ಪೋಸ್ಟ್ ಕಚೇರಿಯ ಎದುರಿಗೆ, ಧಾರವಾಡ ಇವರಿಗೆ ಎಸ್.ಎಸ್.ಎಲ್.ಸಿಯ ವರ್ಗಾವಣೆ ಪ್ರಮಾಣ ಪತ್ರವನ್ನು ಪರಿಶೀಲನೆಗೊಳಪಡಿಸಿ ಹಿಂದಿರುಗಿಸಲು ಪತ್ರ ಸಂಖ್ಯೆ. 639 ದಿನಾಂಕ: 28.06.2023 ರ ಮೂಲಕ ಪತ್ರ ಬರೆಯಲಾಗಿತ್ತು. ಅದರಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಹರ ವಲಯ, ಧಾರವಾಡ ಇವರ ಪತ್ರ ಸಂಖ್ಯೆ. ಸಿ5/ಅಂ.ಪ/ನೈಜತೆ/ಶೃ.ವಿ.ಧ11/2023-24/339 ದಿನಾಂಕ: 27.07.2023 ರ ಮೂಲಕ 4ನೇ ತರಗತಿ ಅಂಕಪಟ್ಟಿಯನ್ನು ಪರಿಶೀಲನೆಗೊಳಪಡಿಸಿ ನೈಜತೆಯ ಬಗ್ಗೆ ದೃಢೀಕರಿಸಿ ಮತ್ತು ಮುಖ್ಯೋಪಾಧ್ಯಾಯರು, ಬಾಸೆಲ್ ಮಿಶನ್ ಹೆಣ್ಣುಮಕ್ಕಳ ಪ್ರೌಢ ಶಾಲೆ, ಧಾರವಾಡ ಇವರ ಪತ್ರ ಸ್ವೀಕೃತ ದಿನಾಂಕ: 25.07.2023 ರ ಪ್ರಕಾರ ದೃಢೀಕರಿಸಿದ್ದಾರೆ.

ಆದ್ದರಿಂದ, ಈಗ ಅವರ ನೇಮಕಾತಿ ಕೋರಿಕೆಯ ಕುರಿತು ವಿವರ ಈ ಕೆಳಗಿನಂತಿರುತ್ತದೆ.

ಶ್ರೀಮತಿ ಶೃತಿ ಮಂಜುನಾಥ ಗುಡದೇನಿ. ಇವರ ತಂದೆಯವರಾದ ಶ್ರೀ ವಿರುಪಾಕ್ಷಪ್ಪ ಎಸ್. ಧರ್ಮಂತನವರ, ಸಿಪಾಯಿ, ಸಂಗೀತ ಮಹಾವಿದ್ಯಾಲಯ, ಧಾರವಾಡ ಇವರು ವಿಶ್ವವಿದ್ಯಾಲಯದ ಸೇವೆಯಲ್ಲಿರುವಾಗಲೇ ದಿನಾಂಕ 27.05.2022 ರಂದು ನಿಧನರಾಗಿರುವುದರಿಂದ ದಿನಾಂಕ 27.03.2023 ರಂದು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ನಿಗದಿತ ನಮೂನೆಯಲ್ಲಿ ದಾಖಲಾತಿಗಳೊಂದಿಗೆ ಮನವಿ ಸಲ್ಲಿಸಿರುತ್ತಾರೆ. ಸದರಿಯವರ ಹೆಸರು ಮದುವೆಯ ನಂತರ ಅವರ ಹೆಸರನ್ನು ಶ್ರೀಮತಿ ಶೃತಿ ಮಂಜುನಾಥ ಗುಡದೇನಿ, ಎಂದು ಬದಲಾವಣೆ ಮಾಡಿಕೊಂಡಿರುವುದಾಗಿ ನೋಟರಿ ಮಾಡಿಸಿದ ಪ್ರಮಾಣ ಪತ್ರ ದಿನಾಂಕ: 23.08.2022 ಅನ್ನು ಸಲ್ಲಿಸಿದ್ದಾರೆ. (ಮದುವೆಯ ಆಮಂತ್ರಣ ಪತ್ರಿಕೆಯ ಝುರಾಕ್ಸ್ ಪ್ರತಿಯನ್ನು ಲಗತ್ತಿಸಿದ್ದಾರೆ.)

ಅರ್ಜಿದಾರರ ತಂದೆಯವರಾದ ಶ್ರೀ ವಿರುಪಾಕ್ಷಪ್ಪ ಎಸ್. ಧರ್ಮಂತನವರ, ಸಿಪಾಯಿ ಹುದ್ದೆಗೆ ನೇಮಕಾತಿ ಹೊಂದಿದವರಾಗಿರುತ್ತಾರೆ. ಅನುಕಂಪದ ಆಧಾರದ ಮೇಲೆ ನೇಮಕಾತಿ ಅನುಶಾಸನ (vide Notification No. S&S/4555 dated: 23.01.1982) ಪ್ರಕಾರ ಈ ಸಂಬಂಧವಾಗಿ ಸರ್ಕಾರವು ಕಾಲಕಾಲಕ್ಕೆ ಶರತ್ತುಗಳಿಗೆ ಅನುಗುಣವಾಗಿ ಅರ್ಹತೆಯನ್ನು ಹೊಂದಿರಬೇಕಾಗಿರುತ್ತದೆ. ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ದಿನಾಂಕ: 12.09.1996 ರ ಸರ್ಕಾರದ ಅಧಿಸೂಚನೆ ನಂ. ಡಿಪಿಎಆರ್/100/ಎಸ್‌ಸಿಎ/95 ರ ಮೂಲಕ ಕೆ.ಸಿ.ಎಸ್. (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996 ಹಾಗೂ ತತ್ಸಂಬಂಧಿತ ತಿದ್ದುಪಡಿ ನಿಯಮಗಳು/ ಮಾರ್ಗಸೂಚಿಗಳು ಈ ಕೆಳಗಿನಂತಿರುತ್ತವೆ.

**3. Eligibility for appointment:-**

(1) Appointment on compassionate grounds under these rules shall not be claimed as a matter of right and shall not be given as a matter of course.

(2) Appointment under these rules shall be restricted to the dependent of a deceased Government Servant in the following order of preference, namely:-

1[(i) in the case of the deceased male married Government Servant, -

(a) the widow; and

(b) son or daughter who is chosen by the widow of the deceased Government Servant, if the widow is not eligible or for any valid reason she is not willing to accept the appointment". (unmarried/ married/ divorced/ widowed) who were dependent upon him and were living with him)

who were dependent on him and were living with him.

Note: In case spouse is pre-deceased then preference shall be given in the order of age of children.

"(ia) in the case of the deceased male unmarried Government Servant, his brother or sister, who is chosen by father and mother or in case of difference in their opinion, chosen by mother, who were dependent upon him and were living with him".

Note: In case parents are pre-deceased then preference shall be given in the order of age of brother/sister.

"(ii) in the case of the deceased female married Government Servant ;

(a) son or daughter who is chosen by the widower of the deceased Government Servant; and

...2

35



(b) widower; if the son or daughter are not eligible or for any valid reason they are not willing to accept the appointment"

who were dependent on her and were living with her.

Note: In case spouse is pre-deceased then preference shall be given in the order of age of children.]1

1[(iia) in the case of the deceased female unmarried Government Servant, her brother or sister, who is chosen by father and mother or in case of difference in their opinion, chosen by mother, who were dependent upon her and were living with her.]

Note: In case parents are pre-deceased then preference shall be given in the order of age of brother/sister.]

[(iii) in the case of deceased married Government Servant whose spouse is also no more and who has minor children, certified guardian of the minor children who is living with them and takes care of the minor children as per the provisions of relevant law.]

(3) [xxxxx] Omitted

ಮೇಲ್ಕಾಣಿಸಿದ ನಿಯಮದ ಉಪ ನಿಯಮ 2(1) ಪ್ರಕಾರ ನಿಧನ ಹೊಂದಿದ ವಿವಾಹಿತ ಪುರುಷ ಸರ್ಕಾರಿ ನೌಕರರ ಹೆಂಡತಿ, ಒಂದು ವೇಳೆ ಹೆಂಡತಿ ಅರ್ಹತೆ ಹೊಂದದಿದ್ದಲ್ಲಿ ಅಥವಾ ಯಾವುದೋ ಕಾರಣಕ್ಕೆ ನೇಮಕಾತಿ ಬಯಸದಿದ್ದಲ್ಲಿ ಮೃತ ನೌಕರನ ವಿಧವೆ ಆಯ್ಕೆ ಮಾಡಿದ ಮಗ ಅಥವಾ ಮಗಳನ್ನು (ವಿವಾಹಿತೆ/ಅವಿವಾಹಿತೆ ಅಥವಾ ವಿಧವೆ) ಅನುಕಂಪದ ಆಧಾರದ ನೇಮಕಾತಿಗಾಗಿ ಪರಿಗಣಿಸಬಹುದು.

ಈ ನಿಯಮದ ಅನುಸಾರ ಅರ್ಜಿದಾರರು ಉಪ ತಹಶೀಲ್ದಾರ ಧಾರವಾಡ-ಹುಬ್ಬಳ್ಳಿ ಇವರಿಂದ ಪಡೆದು ಸಲ್ಲಿಸಿದ ಮೃತರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರ ಸಂಖ್ಯೆ RD5014813039454 ದಿನಾಂಕ 21.07.2022 ಪ್ರಕಾರ ಮೃತ ಕುಟುಂಬದ ಜೀವಂತ ಸದಸ್ಯರ ವಿವರ ಈ ಕೆಳಗಿನಂತಿರುತ್ತದೆ.

| ಅ. ನಂ. | ಹೆಸರು | ವಯಸ್ಸು | ಮೃತರ ಜೊತೆಗೆ ಸಂಬಂಧ | ವೈವಾಹಿಕ ಸ್ಥಿತಿ |
|---|---|---|---|---|
| 1. | ಲಕ್ಷ್ಮವ್ವಾ ಕೋಂ ವೀರುಪಾಕ್ಷಪ್ಪ ಧರ್ಮಂತನವರ | 48 | ಪತ್ನಿ | ವಿವಾಹಿತ |
| 2. | ಶಕುಂತಲಾ ಕೋಂ ಅನಿಲ ನಾಯಕ | 30 | ಮಗಳು | ವಿವಾಹಿತ |
| 3. | ಶೃತಿ ಕೋಂ ಮಂಜುನಾಥ ಗುಡದೇನಿ | 28 | ಮಗಳು | ವಿವಾಹಿತ |
| 4. | ಅಶ್ವಿನಿ ಕೋಂ ಸುರೇಶ ಕರೇಭರಮಪ್ಪನವರ | 23 | ಮಗಳು | ವಿವಾಹಿತ |
| 5. | ಸಂತೋಷ ವೀರುಪಾಕ್ಷಪ್ಪ ಧರ್ಮಂತನವರ | 27 | ಮಗ | ಅವಿವಾಹಿತರು |

ಮೇಲೆ ಓದಲಾದ ಉಪನಿಯಮದನ್ವಯ ಹಾಗೂ ಮೇಲ್ಕಾಣಿಸಿದ ದೃಢೀಕರಣ ಪತ್ರದಂತೆ ಮೃತರ ಪತ್ನಿಯಾದ ಶ್ರೀಮತಿ ಲಕ್ಷ್ಮವ್ವಾ ಕೋಂ ವೀರುಪಾಕ್ಷಪ್ಪ ಧರ್ಮಂತನವರ ಇವರು ಅನುಕಂಪದ ಆಧಾರದ ನೇಮಕಾತಿಗೆ ಪ್ರಥಮ ಆಧ್ಯತೆಯನ್ನು ಹೊಂದಿರುತ್ತಾರೆ. ಆದರೆ, ಅವರು ದಿನಾಂಕ: 23.08.2022 ರಂದು ನೋಟರಿ ಮಾಡಿಸಿದ ಪ್ರಮಾಣ ಪತ್ರದಲ್ಲಿ ಅವರ ಮಗಳಾದ ಶ್ರೀಮತಿ ಶೃತಿ ಮಂಜುನಾಥ ಗುಡದೇನಿ, ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ತಮ್ಮ ಒಪ್ಪಿಗೆ ಇದೆ ಎಂದು ತಿಳಿಸಿದ್ದಾರೆ. ಅದೇ ರೀತಿಯಾಗಿ ಮೃತರ ಕುಟುಂಬದ ಇತರ ಸದಸ್ಯರಾದ ಶ್ರೀ ಶಕುಂತಲಾ ಕೋಂ ಅನಿಲ ನಾಯಕ, ಇಬರು ದಿನಾಂಕ: 23.08.2022, ಶ್ರೀಮತಿ ಅಶ್ವಿನಿ ಕೋಂ ಸುರೇಶ ಕರೇಭರಮಪ್ಪನವರ, ಇವರು ದಿನಾಂಕ: 23.08.2022 ಹಾಗೂ ಶ್ರೀ ಸಂತೋಷ ವಿರುಪಾಕ್ಷಪ್ಪ ಧರ್ಮಂತನವರ, ಇವರು ದಿನಾಂಕ: 23.08.2022 ರಂದು ಸಲ್ಲಿಸಿದ ಪ್ರತ್ಯೇಕವಾಗಿ ನೋಟರಿ ಮಾಡಿಸಿರುವ ಪ್ರಮಾಣ ಪತ್ರಗಳ ಪ್ರಕಾರ ಅವರ ಸಹೋದರಿಯಾದ ಶ್ರೀಮತಿ ಶೃತಿ ಮಂಜುನಾಥ ಗುಡದೇನಿ, ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ತಮ್ಮ ಒಪ್ಪಿಗೆ ಇದೆ ಎಂದು ತಿಳಿಸಿ ಮತ್ತು ಅದಕ್ಕೆ ತಮ್ಮ ಯಾವುದೇ ರೀತಿಯ ತಂಟೆ ವ ತಕರಾರು ಇರುವುದಿಲ್ಲವೆಂದು ತಿಳಿಸಿದ್ದಾರೆ.

ತಿದ್ದುಪಡಿಯಾದ ಸರ್ಕಾರದ ಆದೇಶ ಸಂಖ್ಯೆ. ಸಿ.ಆ.ಸು.ಇ. 26 ಸೇಅನೇ 2018 ದಿನಾಂಕ: 09-04-2021 ರ ಪ್ರಕಾರ ಮೃತ ಸರ್ಕಾರಿ ನೌಕರನ ಕುಟುಂಬ ಆರ್ಥಿಕ ಅಡಚಣೆಯಲ್ಲಿರಬೇಕೆಂಬ ಷರತ್ತು ಗ್ರೂಪ್-'ಸಿ' ಮತ್ತು 'ಡಿ'ಗೆ ಸೇರಿದ ಸರ್ಕಾರಿ ನೌಕರರಿಗೆ ಅನ್ವಯವಾಗತಕ್ಕದಲ್ಲವೆಂದು ಸ್ಪಷ್ಟವಾಗಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಮೃತರಾಗಿರುವ ದಿವಂಗತ ಶ್ರೀ ವಿರುಪಾಕ್ಷಪ್ಪ ಎಸ್. ಧರ್ಮಂತನವರ, ಇವರು ಗ್ರೂಪ್ 'ಡಿ' ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಆದ್ದರಿಂದ, ಈ ಪ್ರಕರಣದಲ್ಲಿ ನಿಯಮ 5ರ ಅನುಸಾರ ಕುಟುಂಬದ ಆದಾಯ ಪರಿಗಣನೆಗೆ ಬರುವುದಿಲ್ಲ.

***4) Conditions of Appointment:***

Appointment on compassionate grounds under these rules shall be subject to the following conditions namely:

(1) The family of the deceased Government Servant should be in a financial crisis or destitution.

...3

Explaintion : (a) Family of deceased Government Servent shall be considered to be in financial crisis or destitution if the recurring monthly income of the family from all sources is less than the total emoluments including Dearness allowance, House Rent Allowance and City Compensatory Allowance admissioble at Bangalore on the average of the minimum and the maximum of the scale of pay of the post of the First Division Assistant, as on the date of making application for compassionate appointment. For calucating such monthly income, the income from family pension, lumpsum pensionary benefits and interest earned thereon shall be excluded.

(b) Recurring monthly income form all sources other than family pension, lumpsum pensionary benefits and the interest earned thereon, of the family for the purpose of this rule shall be computed by the Head of the Office or the Head of the Department or the appointing authority.

(i) on the basis of the last annual property return filed by the deceased Government Servant and if, for any reason it is not available, on the basis of the certificate of income issued by a Revenue Officer not below the rank of Tashildar, and

(ii) in case any member of the family of the deceased Government Servant is employed in any State or Central Government Service or a public or private sector undertaking or a private establishment, on the basis of a certificate issued by his employer and in case such member is self employed on the basis of certificate issued by a revenue officer not below the rank of Tahasildar.

***Age limits as per Change Clayse 4(2) :***

(2) Person seeking be within the age limit specified for the post in the relevant rules of recruitment specilly made in respect of any service or post read with sub rule 93) of rule 6 of the Karnataka Civil Services (General Recruitment) Rules, 1977 and where it is not so specified such person shall be within the age limits specified in the Karnataka Civil Services (General Recruitment) Rules, 1977.

ಈ ಉಪನಿಯಮದ ಪ್ರಕಾರ ಹಾಗೂ ಪ್ರಚಲಿತ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 55 ಸೇನೆನಿ 2008 ದಿನಾಂಕ 15.01.2009 ರ ಪ್ರಕಾರ ಅರ್ಜಿದಾರರು ಸಲ್ಲಿಸಿದ ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟುಗಳ ದೃಢೀಕರಣ ಪ್ರಮಾಣ ಪತ್ರ ಸಂಖ್ಯೆ RD2034813063251 ದಿನಾಂಕ 17.08.2022 ರ ಪ್ರಕಾರ ಪರಿಶಿಷ್ಟ ಪಂಗಡಗಳು (ವಾಲ್ಮಿಕಿ) ವರ್ಗಕ್ಕೆ ಸೇರಿದವರಾಗಿರುತ್ತಾರೆ. ಸದರಿ ಅಭ್ಯರ್ಥಿ ನೇಮಕಾತಿಗೆ 40 ವರ್ಷಗಳ ವಯೋಮಿತಿ ಇರುತ್ತದೆ. ಅರ್ಜಿದಾರರು ಸಲ್ಲಿಸಿದ ಶಾಲಾ ವರ್ಗಾವಣೆ ಪ್ರಮಾಣ ಪತ್ರವನ್ನು ಸಂಬಂಧಿಸಿದ ಮುಖ್ಯೋಪಾಧ್ಯಾಯರು, ಬಾಸೆಲ್ ಮಿಶನ್ ಹೆಣ್ಣುಮಕ್ಕಳ ಪ್ರೌಢ ಶಾಲೆ, ಧಾರವಾಡ ಇವರಿಗೆ 7ನೇ ತರಗತಿಯ ವರ್ಗಾವಣೆ ಪ್ರಮಾಣ ಪತ್ರವನ್ನು ಕಳುಹಿಸಲಾಗಿ ನೈಜವಾಗಿರುವ ಬಗ್ಗೆ ಪತ್ರವು ವಿಶ್ವವಿದ್ಯಾಲಯದ ಅವಕ ಸಂಖ್ಯೆ. 1204 ದಿನಾಂಕ 04.07.2023 ರಂದು ಸ್ವೀಕೃತವಾಗಿದ್ದು ಅದರನುಸಾರ ಹಾಗೂ ಧಾರವಾಡ ಶಹರದ ಕ್ಷೇತ್ರ ಶಿಕ್ಷಣಾಧಿಕಾರಿಗಳು ನೈಜವೆಂದು ದೃಢೀಕರಿಸಿರುವ ಶಾಲಾ ದಾಖಲಾತಿಗಳ ಪ್ರಕಾರ ಅರ್ಜಿದಾರರ ಜನ್ಮ ದಿನಾಂಕ 18.12.1994 ಇದ್ದು ಅರ್ಜಿ ಸಲ್ಲಿಸಿದ ದಿನದಂದು 28 ವರ್ಷ 04 ತಿಂಗಳು 11 ದಿನ ಪೂರ್ಣಗೊಂಡಿರುತ್ತದೆ.

ಸರ್ಕಾರಿ ಅಧಿಸೂಚನೆ ಸಂ. ಡಿಪಿಎಆರ್ 100 ಎಸ್‌ಸಿಎ 95 ದಿನಾಂಕ: 12.09.1996 ರ ಉಪನಿಯಮ 3 ಹಾಗೂ 4 ರ ಪ್ರಕಾರ ಇತರೆ ಷರತ್ತುಗಳು ಈ ಕೆಳಗಿನಂತಿರುತ್ತದೆ.

(3) Person seeking appointment should possess the minimum qualification specified for the post in the relevant rules of recruitment specially made in respect of any service or post.

[1][Provided the nothing in this sub rule (5) of rule 5 of the Karnataka Civil Services (General Recruitment) Rules, 1977 in so for as it relates to educational qualification, shall apply to appointment under these rules to any Group 'D' post.']

[2][(4) Appointment shall be confined to any post in Group 'C' or Group 'D' depending upon the qualification specified for the post but excluding the posts carrying the pay scales higher than the scale of pay of the post of Assistant in the Karnataka Government Secretariat as may be revised from time to time and any other post in either of the groups as may be specified by the Government from time to time.]

(5) Appointment shal be made only against a direct recruitment vacancy.

ಈ ಮೇಲಿನ ಉಪನಿಯಮದ ಪ್ರಕಾರ ಈ ವಿಶ್ವವಿದ್ಯಾಲಯದ ನೌಕರರ ನೇಮಕಾತಿ ಅನುಶಾಸನ 1988 ರ ಪ್ರಕಾರ ಪದವಿ ಪೂರ್ವ ಹಾಗೂ ಅದಕ್ಕೆ ತತ್ಸಮಾನ ಶೈಕ್ಷಣಿಕ ಅರ್ಹತೆ ಹೊಂದಿದ್ದಲ್ಲಿ 'ಸಿ' ವೃಂದದ ಕಿರಿಯ ಸಹಾಯಕ ಹುದ್ದೆಗೂ ಮತ್ತು 4 ನೇ ತರಗತಿ ಶೈಕ್ಷಣಿಕ ಅರ್ಹತೆ ಹೊಂದಿದ್ದಲ್ಲಿ 'ಡಿ' ವೃಂದದ ಹುದ್ದೆಗೆ ಹಾಗೂ ಇದಕ್ಕಿಂತ ಕಡಿಮೆ ಶೈಕ್ಷಣಿಕ ಅರ್ಹತೆ ಹೊಂದಿದ್ದಲ್ಲಿ ಸಫಾಯಿ ಕರ್ಮಚಾರಿ (ಜಾಡಮಾಲಿ) ಹುದ್ದೆಗೆ ಸಾಮಾನ್ಯವಾಗಿ ನೇಮಕಾತಿ ಮಾಡಲಾಗುತ್ತಿದೆ.

ಅರ್ಜಿದಾರರು ಸದರ ಶೈಕ್ಷಣಿಕ ಅರ್ಹತೆಯು 4 ನೇ ತರಗತಿ ಶೈಕ್ಷಣಿಕ ಅಂಕಪಟ್ಟಿಯನ್ನು ದೃಢೀಕರಿಸಲು ಅದರಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಹರ ವಲಯ, ಧಾರವಾಡ ಇವರಿಗೆ ಅಂಕಪಟ್ಟಿಗಳನ್ನು ಕಳುಹಿಸಿಲಾಗಿತ್ತು. ಅದರನುಸಾರ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಧಾರವಾಡ ಶಹರ, ಧಾರವಾಡ ಪತ್ರ ಸಂಖ್ಯೆ. ಸಿ5/ಅಂ.ಪ/ನೈಜತೆ/ಶೈ.ವಿ.ಧ/11/2023-24/339 ದಿನಾಂಕ: 27.07.2023 ರ ಮೂಲಕ, ಶಾಲೆಗೆ ಸಂದರ್ಶನ ನೀಡಿ, ಶಾಲಾ ದಾಖಲೆಗಳನ್ನು ಪರಿಶೀಲಿಸಿ 4 ನೇ ತರಗತಿ ಅಂಕಪಟ್ಟಿ ಪ್ರಮಾಣ ಪತ್ರದ ನೈಜತೆಯನ್ನು ಪರಿಶೀಲಿಸಿ ನೈಜವಾಗಿರುವ ಬಗ್ಗೆ ತಿಳಿಸಿದ್ದಾರೆ. ಅದರ ಅನುಸಾರ ಅರ್ಜಿದಾರರು ಶೈಕ್ಷಣಿಕ ಅರ್ಹತೆ ಅನುಸಾರವಾಗಿ ಸಿಪಾಯಿ ಹುದ್ದೆಗೆ ಅರ್ಹರಿರುತ್ತಾರೆ.

ಮೇಲ್ಕಾಣಿಸಿದ ನಿಯಮದ ಉಪನಿಯಮ 5 ಈ ಕೆಳಗಿನಂತಿರುತ್ತದೆ.

*(5) Application for appointment :*

Every dependent of a deceased Government Servant, Seeking appointment under these rules shall make an application within one year from the date of death of the Government Servant, in such from, as may be notified by the Government, from time to time, to the Head of the Department under whom the deceased Government servant was working.

[1][Provided that in the case of a minor he must have attained the age of eighteen years within one year from the date of death of the Government Servant and he must make an application within one year thereafter.]

ಅರ್ಜಿದಾರರ ಪತಿ ಹಾಗೂ ಈ ವಿಶ್ವವಿದ್ಯಾಲಯದ ನೌಕರರರಾದ ದಿವಂಗತ ಶ್ರೀ ವಿರುಪಾಕ್ಷಪ್ಪ ಎಸ್. ಧರ್ಮಂತನವರ, ಇವರು ದಿನಾಂಕ: 27.05.2022 ರಂದು ನಿಧನರಾಗಿರುತ್ತಾರೆಂದು, ಜನನ ಮತ್ತು ಮರಣಗಳ ಮುಖ್ಯ ರಜಿಸ್ಟ್ರಾರ್ ಇವರಿಂದ ಪಡೆದ ಮರಣ ಪ್ರಮಾಣ ಪತ್ರದ ಸಂಖ್ಯೆ. 803083/ಎಚ್/ಡಿ/2022/006401 ದಿನಾಂಕ 02.06.2022 ರಂದು ಪಡೆದು ಸಲ್ಲಿಸಿದ ಮರಣ ಪ್ರಮಾಣ ಪತ್ರದಲ್ಲಿ ಉಲ್ಲೇಖ ಇರುತ್ತದೆ. ಈ ಉಪ ನಿಯಮದ ಪ್ರಕಾರ ನೇಮಕಾತಿಗೆ ನೌಕರರು ಮೃತರಾದ ನಿಗದಿತ ಒಂದು ವರ್ಷದ ಅವಧಿಯಲ್ಲಿ ಅರ್ಜಿದಾರರು ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆ.

ಮೇಲ್ಕಾಣಿಸಿದ ನಿಯಮದ ಉಪನಿಯಮ 6 ರ ಆಯ್ದ ಭಾಗ ಈ ಕೆಳಗಿನಂತಿರುತ್ತದೆ.

*(6) Appointment by the Competent Authority :*

(1) On receipt of the application under rule 5, the Head of the Department, if satisfied that the applicant fulfills all the conditions specified under these rules, shall appoint, where he is the appointing authority and if not direct the appropriate appointing authority to issue the order of appointment.

(2) The appointment undere sub-rule (1) shall be made as far as possible within a period of three months from the date of receipt of the application under rule 5.

ಮುಂದುವರೆದು, ಶ್ರೀಮತಿ ಶೃತಿ ಮಂಜುನಾಥ ಗುಡದೇನಿ, ಇವರು 4 ನೇ ತರಗತಿ ಶೈಕ್ಷಣಿಕ ವಿದ್ಯಾರ್ಹತೆಯನ್ನು ಪರಿಗಣಿಸಿ ಮೇಲ್ಕಾಣಿಸಿದ ಕವಿವಿಯ ಅನುಶಾಸನ ಮತ್ತು ಸಂಬಂಧಿಸಿದ ಸರ್ಕಾರದ ನಿಯಮಾವಳಿಗಳನ್ವಯ ಅನುಕಂಪದ ಆಧಾರದ ಮೇಲೆ ಗ್ರೂಪ್ 'ಡಿ' (ಸಿಪಾಯಿ) ಹುದ್ದೆಗೆ ನೇಮಕ ಮಾಡುವ ವಿಷಯವಾಗಿ ಸಿಂಡಿಕೇಟ್ ಸಭೆಯ ಪರಿಶೀಲನೆಗಾಗಿ ಮಂಡಿಸಲು ಸಿದ್ಧಪಡಿಸಿದ ಸಿಂಡಿಕೇಟ್ ಸಭೆಯ ಕಲಂ ನ್ನು ತಮ್ಮ ಒಪ್ಪಿಗೆಗಾಗಿ ಹಾಗೂ ಸಹಿಗಾಗಿ ಮಂಡಿಸಲಾಗಿದೆ.

ಕಾರಣ, ಶೈಕ್ಷಣಿಕ ವಿದ್ಯಾರ್ಹತೆಯನ್ನು ಪರಿಗಣಿಸಿ ಶ್ರೀಮತಿ ಶೃತಿ ಮಂಜುನಾಥ ಗುಡದೇನಿ ಇವರ ವಿನಂತಿಯ ಮೇರೆಗೆ ಅವರ 4 ನೇ ತರಗತಿ ಶೈಕ್ಷಣಿಕ ವಿದ್ಯಾರ್ಹತೆಯನ್ನು ಪರಿಗಣಿಸಿ ಮೇಲ್ಕಾಣಿಸಿದ ಕವಿವಿಯ ಅನುಶಾಸನ ಮತ್ತು ಸಂಬಂಧಿಸಿದ ಸರ್ಕಾರದ ನಿಯಮಾವಳಿಗಳನ್ವಯ ಅನುಕಂಪದ ಆಧಾರದ ಮೇಲೆ ಗ್ರೂಪ್ 'ಡಿ' (ಸಿಪಾಯಿ) ಹುದ್ದೆಗೆ ನೇಮಕ ಮಾಡುವ ವಿಷಯದ ಪ್ರಸ್ತಾವನೆಯನ್ನು ಪರಿಶೀಲಿಸುವ ಕುರಿತು ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲಾಗಿದೆ.

## ಸಿಂಡಿಕೇಟ ಸಭೆಯ ಕಲಂ

09) **ವಿಷಯ:** ಎಮ್ ಫಿಲ್ ಪದವಿಯ ಆಧಾರದ ಮೇಲೆ ನೇಮಕಗೊಂಡ 04 ಜನ ಬೋಧಕ ಸಿಬ್ಬಂದಿಗಳಾದ ಶ್ರೀಮತಿ. ಜ್ಯೋತಿ. ಎಸ್. ದೊಡ್ಡಮನಿ, ಡಾ. (ಶ್ರೀಮತಿ) ಗೀತಾ ಎನ್. ಚವ್ಹಾಣ, ಡಾ. ಹರ್ಷಾ ಡಿ ನೀಲಗುಂದ, ಡಾ. (ಶ್ರೀಮತಿ) ನಿರುಪಮಾ ಜೆ. ಎಮ್ ಇವರುಗಳು ಯುಜಿಸಿ ನಿಗದಿಪಡಿಸಿದ ನೆಟ್/ಸೆಟ್/ಪಿಎಚ್.ಡಿ. ವಿದ್ಯಾರ್ಹತೆಯನ್ನು ಹೊಂದದೇ ಇರುವ ಪ್ರಯುಕ್ತ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಇವರು ವ್ಯಕ್ತಪಡಿಸಿದ ಆಕ್ಷೇಪಣೆ ಹಿನ್ನೆಲೆಯಲ್ಲಿ ಸದರ ಪ್ರಕರಣಕ್ಕೆ ಸಂಬಂಧಿಸಿದಂತೆ ಸದರ ಬೋಧಕ ಸಿಬ್ಬಂದಿಯವರು ದಾಖಲಿಸಿದ WRIT PETITION No. 100610 of 2022 (S-RES) ರ ಕುರಿತಂತೆ ದಿನಾಂಕ: 12.06.2023 ರಂದು ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಪೀಠವು ನೀಡಿರುವ ಅಂತಿಮ ಆದೇಶವನ್ನು ಆಡಳಿತ ಮಂಡಳಿಯ ಅವಗಾಹನೆಗಾಗಿ ಹಾಗೂ ಪರಿಶೀಲನೆಗಾಗಿ ಮಂಡಿಸುವ ಕುರಿತು.

**ಟಿಪ್ಪಣಿ:**

ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಇವರು ದಿನಾಂಕ: 31.03.2017 ಕ್ಕೆ ಅಂತ್ಯಗೊಂಡಂತೆ ಸಲ್ಲಿಸಿದ ಸಾಮಾನ್ಯ ಮತ್ತು ಸಾಮಾಜಿಕ ವಲಯಗಳ ವರದಿಯ ಕಂಡಿಕೆ ಸಂಖ್ಯೆ.4.1.5 (ಅನುಬಂಧ-4.5) ರಲ್ಲಿ ಪ್ರಸ್ತಾಪಗೊಂಡ ನಾಲ್ಕು ಜನ ಬೋಧಕ ಸಿಬ್ಬಂದಿಗಳಾದ **ಶ್ರೀಮತಿ.ಜ್ಯೋತಿ.ಎಸ್.ದೊಡ್ಡಮನಿ, ಡಾ.(ಶ್ರೀಮತಿ).ಗೀತಾ.ಎಸ್.ಚವ್ಹಾಣ, ಶ್ರೀಮತಿ.ನಿರೂಪಮಾ. ಜೆ.ಎಮ್., ಶ್ರೀ.ಎಚ್.ಡಿ.ನೀಲಗುಂದ** ಇವರುಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳನ್ನು ಆಡಳಿತ ಮಂಡಳಿ ಸಭೆಗೆ ಮರುನಿವೇದಿಸಲಾಗಿದೆ.

ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ವಿವಿಧ ವಿಭಾಗಗಳಲ್ಲಿನ **ಉಪನ್ಯಾಸಕ (ವೇತನ ಶ್ರೇಣಿ 8000-275-13500)** ಹುದ್ದೆಗಳ ಭರ್ತಿಗಾಗಿ 2000 ರ ರೆಗ್ಯುಲೇಶನ್‌ದ ವಿನಿಯಮಗಳ ಆಧಾರದ ಮೇಲೆ **ದಿನಾಂಕ: 27.09.2008 ರಂದು** ಹೊರಡಿಸಲಾದ ವಿಶ್ವವಿದ್ಯಾಲಯದ ಅಧಿಸೂಚನೆ ಮೇರೆಗೆ ನೇಮಕಾತಿಯ ಎಲ್ಲ ಆಯ್ಕೆ ಪ್ರಕ್ರಿಯೆಗಳು ಸಂಪೂರ್ಣಗೊಂಡಂತೆ ಸದರ 4 ಜನ ಸಿಬ್ಬಂದಿಗಳನ್ನು **"ಉಪನ್ಯಾಸಕ"** ಹುದ್ದೆಗೆ ನೇಮಕ ಮಾಡಿಕೊಳ್ಳಲು ಬಿ.ಓ.ಎ (ನೇಮಕಾತಿ ಮಂಡಳಿ) ದಿನಾಂಕ: 15 & 16.06.2009 ಹಾಗೂ 21 & 22.06.2009 ರಂದು ಜರುಗಿದ ತನ್ನ ಸಭೆಯಲ್ಲಿ ಆಯ್ಕೆ ಮಾಡಿ ಶಿಫಾರಸ್ಸು ಮಾಡಿತ್ತು.

ಆದರೆ, ಸದರ **ದಿನಾಂಕ: 27.09.2008** ರ ವಿಶ್ವವಿದ್ಯಾಲಯದ ನೇಮಕಾತಿ ಅಧಿಸೂಚನೆಯನ್ನು **ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾದ ರಿಟ್ 60507/2009 ರ ಅರ್ಜಿಯು ತಡವಾಗಿ 2011 ರಲ್ಲಿ ವಿಲೇವಾರಿಯಾಗಿದ್ದ ಕಾರಣದಿಂದಾಗಿ** ನೇಮಕಾತಿ ಆದೇಶಗಳನ್ನು 2011-2012 ರ ಅವಧಿಯಲ್ಲಿ ಹೊರಡಿಸಲಾಗಿದ್ದು, ಆ ಸಮಯದಲ್ಲಿ 2006 ರ ಯುಜಿಸಿ ಮಾರ್ಗಸೂಚಿಗಳು ಜಾರಿಗೆ ಬಂದು, "ಉಪನ್ಯಾಸಕ" ಹುದ್ದೆ "ಸಹಾಯಕ ಪ್ರಾಧ್ಯಾಪಕ" ಎಂದು ಮರುಪದನಾಮಗೊಂಡಿದ್ದರಿಂದ ಸದರ 4 ಜನ ಸಿಬ್ಬಂದಿಗಳನ್ನು **"ಉಪನ್ಯಾಸಕ"** ಎಂದು ನೇಮಕಗೊಳಿಸುವ ಬದಲಾಗಿ **"ಸಹಾಯಕ ಪ್ರಾಧ್ಯಾಪಕ"** ಹುದ್ದೆಗೆ ನೇಮಕ ಮಾಡಿ 2006 ರ ಯುಜಿಸಿ ಪರಿಷ್ಕೃತ ವೇತನ ಶ್ರೇಣಿ ರೂ.15600-39100 +ಎಜಿಪಿ.6000 ದಲ್ಲಿ ರೂ.21,600/- ಗಳಿಗೆ ವೇತನ ನಿಗದಿಪಡಿಸಿ ಈ ಕೆಳಗಿನಂತೆ ನೇಮಕಾತಿ ಆದೇಶಗಳನ್ನು ಹೊರಡಿಸಲಾಗಿರುತ್ತದೆ.

| ಅ. ಸಂ | ಸಿಬ್ಬಂದಿಯ ಹೆಸರು | ನೇಮಕಗೊಂಡ ಹುದ್ದೆ/ವಿಭಾಗ | ನೇಮಕಾತಿ ಆದೇಶ ಪತ್ರ ಸಂಖ್ಯೆ ಹಾಗೂ ದಿನಾಂಕ. | ಸೇವೆಗೆ ಹಾಜರಾದ ದಿನಾಂಕ |
|---|---|---|---|---|
| 1 | ಶ್ರೀಮತಿ.ಜ್ಯೋತಿ. ಎಸ್.ದೊಡ್ಡಮನಿ, | ಸಹಾಯಕ ಪ್ರಾಧ್ಯಾಪಕರು, ಭೌತಶಾಸ್ತ್ರ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, | 3442/ 20.09.2011 | 28.09.2011 |
| 2 | ಡಾ..(ಶ್ರೀಮತಿ).ಗೀತಾ.ಎನ್.ಚವ್ಹಾಣ, | ಸಹಾಯಕ ಪ್ರಾಧ್ಯಾಪಕರು, ಭೌತಶಾಸ್ತ್ರ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, | 3091/ 30.08.2011 | 02.09.2011 |
| 3 | ಡಾ.(ಶ್ರೀಮತಿ).ನಿರುಪಮಾ ಜೆ.ಎಮ್., | ಸಹಾಯಕ ಪ್ರಾಧ್ಯಾಪಕರು, ಭೌತಶಾಸ್ತ್ರ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, | 2344/ 28.07.2011 | 03.08.2011 |
| 4 | ಶ್ರೀ.ಹರ್ಷಾ.ಡಿ.ನೀಲಗುಂದ, | ಸಹಾಯಕ ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, | 5858/ 13.01.2012 | 13.01.2012 |

ತದನಂತರ, ಸದರ 4 ಜನ ಸಿಬ್ಬಂದಿಗಳು ಸಲ್ಲಿಸಿದ ಸೇವಾವಧಿ ಹಾಗೂ ಅರ್ಹತೆಗನುಗುಣವಾಗಿ 2006 ರ ಯುಜಿಸಿ ಮಾರ್ಗಸೂಚಿಗಳ ಪ್ರಕಾರ ಬಿ.ಓ.ಎ ಶಿಫಾರಸ್ಸಿಸಿದನ್ವಯ ಈ ಕೆಳಕಂಡಂತೆ ಪದೋನ್ನತಿಗಳನ್ನು ನೀಡಲಾಗಿರುತ್ತದೆ.

| ಅ.ಸಂ | ಸಿಬ್ಬಂದಿಯ ಹೆಸರು | ಪದೋನ್ನತಿ ಹೊಂದಿದ ಹುದ್ದೆ | ಪದೋನ್ನತಿ ದಿನಾಂಕ: | ಪದೋನ್ನತಿ ಆದೇಶ ಪತ್ರ ಸಂಖ್ಯೆ ಹಾಗೂ ದಿನಾಂಕ. |
|---|---|---|---|---|
| 1 | ಶ್ರೀಮತಿ.ಜ್ಯೋತಿ. ಎಸ್.ದೊಡ್ಡಮನಿ, | ಸಹಾಯಕ ಪ್ರಾಧ್ಯಾಪಕ ಎಜಿಪಿ-6000 ದಿಂದ ಸಹಾಯಕ ಪ್ರಾಧ್ಯಾಪಕ ಎಜಿಪಿ-7000 | 28.09.2016 | 4954/24.03.2018 |

ಮು.ತಿ.ನೋ..

| | | | | |
|---|---|---|---|---|
| 2 | ಡಾ.(ಶ್ರೀಮತಿ).ಗೀತಾ.ಎಸ್.ಚವ್ಹಾಣ, | 1) ಸಹಾಯಕ ಪ್ರಾಧ್ಯಾಪಕ ಎಜಿಪಿ–6000 ದಿಂದ ಸಹಾಯಕ ಪ್ರಾಧ್ಯಾಪಕ ಎಜಿಪಿ–7000 | 02.09.2015 | 4958/24.03.2018 |
| | | 2) ಸಹಾಯಕ ಪ್ರಾಧ್ಯಾಪಕ ಎಜಿಪಿ–7000 ದಿಂದ ಸಹಾಯಕ ಪ್ರಾಧ್ಯಾಪಕ ಎಜಿಪಿ–8000 | 02.09.2020 | 1339/26.10.2021 |
| 3 | ಡಾ.(ಶ್ರೀಮತಿ).ನಿರುಪಮಾ ಜೆ.ಎಮ್., | ಸಹಾಯಕ ಪ್ರಾಧ್ಯಾಪಕ ಎಜಿಪಿ–6000 ದಿಂದ ಸಹಾಯಕ ಪ್ರಾಧ್ಯಾಪಕ ಎಜಿಪಿ–7000 | 03.08.2016 | 4959/24.03.2018 |
| 4 | ಶ್ರೀ.ಹರ್ಷಾ.ಡಿ.ನೀಲಗುಂದ, | ಸಹಾಯಕ ಪ್ರಾಧ್ಯಾಪಕ ಎಜಿಪಿ–6000 ದಿಂದ ಸಹಾಯಕ ಪ್ರಾಧ್ಯಾಪಕ ಎಜಿಪಿ–7000 | 13.01.2017 | 4952/03.08.2018 |

ಎಮ್.ಫಿಲ್ ಪದವಿಯ ಆಧಾರದ ಮೇಲೆ ನೇಮಕಗೊಂಡ ನೆಟ್/ಸೆಟ್/ಸ್ಲೆಟ್/ಪಿಹೆಚ್‌ಡಿ ವಿದ್ಯಾರ್ಹತೆಯನ್ನು ಹೊಂದದೆ ಇರುವ ನಾಲ್ಕು ಜನ ಬೋಧಕ ಸಿಬ್ಬಂದಿಗಳಾದ ಶ್ರೀಮತಿ.ಜ್ಯೋತಿ.ಎಸ್.ದೊಡ್ಡಮನಿ, ಡಾ.(ಶ್ರೀಮತಿ).ಗೀತಾ.ಎಸ್.ಚವ್ಹಾಣ, ಶ್ರೀಮತಿ.ನಿರೂಪಮಾ. ಜೆ.ಎಮ್., ಶ್ರೀ.ಎಚ್.ಡಿ.ನೀಲಗುಂದ ಇವರುಗಳಿಗೆ 2006 ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿ ವೇತನವನ್ನು ನಿಗದಿಪಡಿಸಿ ಅದರಂತೆ ಪಾವತಿಸಿದ ವೇತನದ ಕುರಿತಂತೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಇವರು ಸಲ್ಲಿಸಿದ ಸಾಮಾನ್ಯ ಮತ್ತು ಸಾಮಾಜಿಕ ವಲಯಗಳ ವರದಿಯ ಕಂಡಿಕೆ ಸಂಖ್ಯೆ.4.1.5 (ಅನುಬಂಧ–4.5) ರಲ್ಲಿ ಆಕ್ಷೇಪಣೆಯನ್ನು ವ್ಯಕ್ತಪಡಿಸಿದ್ದಕ್ಕೆ ಸಂಬಂಧಿಸಿದಂತೆ ಈಗಾಗಲೇ ವಿಸ್ತರಿಸಿದ 2006 ರ ಯುಜಿಸಿ ವೇತನ ಶ್ರೇಣಿಯನ್ನು ಹಿಂಪಡೆಯಲು ವಿಷಯವನ್ನು ಸಿಂಡಿಕೇಟ್ ಸಭೆ ಮುಂದೆ ಮಂಡಿಸಿ ಕ್ರಮವಹಿಸಲಾಗುವುದೆಂದು ದಿನಾಂಕ: 26.10.2021 ರಂದು ಜರುಗಿದ ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಉತ್ತರವನ್ನು ಸಲ್ಲಿಸಲಾಗಿತ್ತು.

ಅದರಂತೆ, ಈ ವಿಷಯವನ್ನು ದಿನಾಂಕ: 29.12.2021 ರಂದು ಜರುಗಿದ ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸಿದಾಗ, ಕಲಂ ಸಂಖ್ಯೆ.10 ರಲ್ಲಿ ಆಡಳಿತ ಮಂಡಳಿಯು ಈ ಕೆಳಕಂಡಂತೆ ನಿರ್ಣಯವನ್ನು ಕೈಗೊಂಡಿದ್ದು ಇರುತ್ತದೆ.

**"ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿದ ಆಡಳಿತ ಮಂಡಳಿಯು, ಶ್ರೀಮತಿ.ಜ್ಯೋತಿ.ಎಸ್.ದೊಡ್ಡಮನಿ, ಶ್ರೀಮತಿ.ಗೀತಾ.ಎಸ್.ಚವ್ಹಾಣ, ಶ್ರೀಮತಿ. ನಿರೂಪಮಾ. ಜೆ.ಎಮ್., ಶ್ರೀ. ಎಚ್.ಡಿ.ನೀಲಗುಂದ ಇವರುಗಳಿಗೆ ಈಗಾಗಲೇ ನಿಗದಿಪಡಿಸಿರುವ 2006 ರ ಯುಜಿಸಿ ವೇತನ ಶ್ರೇಣಿಯು ಸರ್ಕಾರಿ ಆದೇಶ ದಿನಾಂಕ: 24.12.2009 ರಲ್ಲಿನ ನಿರ್ದೇಶನಗಳಿಗೆ ವ್ಯತಿರಿಕ್ತವಾಗಿರುವುದರಿಂದ ಸದರಿ ಸಿಬ್ಬಂದಿಗಳಿಗೆ ಈಗಾಗಲೇ ವಿಸ್ತರಿಸಿರುವ 2006 ರ ಯುಜಿಸಿ ವೇತನ ಶ್ರೇಣಿಯನ್ನು ನಿಯಮಾನುಸಾರ ಹಿಂಪಡೆದು ಹೆಚ್ಚುವರಿಯಾಗಿ ಪಾವತಿಸಲ್ಪಟ್ಟ ವೇತನವನ್ನು ವಸೂಲಾತಿ ಮಾಡಲು ಕ್ರಮವಹಿಸಬೇಕೆಂದು ನಿರ್ಣಯಿಸಿತು."**

ಈತನ್ಮಧ್ಯೆ, ಅಧ್ಯಕ್ಷರು, ಕರ್ನಾಟಕ ಯುನಿವರ್ಸಿಟಿಸ್ ಕಾನ್‌ಸ್ಟಿಟ್ಯೂಯೆಂಟ್ ಟೀಚರ್ಸ್ ಅಸೋಸಿಯೇಶನ್, ಧಾರವಾಡ ಇವರು ದಿನಾಂಕ: 20.01.2022 ರ ತಮ್ಮ ಪತ್ರದಲ್ಲಿ, ಸದರ ಬೋಧಕ ಸಿಂಬಂದಿಗಳಿಂದ ಸಂಘಕ್ಕೆ ಸಲ್ಲಿಸಲ್ಪಟ್ಟ ಮನವಿ ಹಾಗೂ ಶ್ರೀ.ಗುರುನಾಥ ಎಂಬುವವರ ಪ್ರಕರಣದಲ್ಲಿ ಮಾನ್ಯ ಉಚ್ಚನ್ಯಾಯಾಲಯ ನೀಡಿದ ದಿನಾಂಕ 11.12.2019 ರ ತೀರ್ಪು ಹಾಗೂ 2016 ರ ಯುಜಿಸಿ ಪತ್ರದಲ್ಲಿನ ಅಂಶಗಳನ್ವಯ ಯುಜಿಸಿ ನಿಯಮಾವಳಿಗಳು ಭವಿಷ್ಯವರ್ತಿಯಾಗಿ ಜಾರಿಗೆ ಬರುತ್ತವೆಯೆಂದು ಹೇಳುತ್ತ ಸದರ 4 ಜನ ಬೋಧಕ ಸಿಬ್ಬಂದಿಗಳು 11.07.2009 ಕ್ಕಿಂತ ಮೊದಲೇ ಎಮ್.ಫಿಲ್ ಪದವಿಯನ್ನು ಹೊಂದಿದ್ದರಿಂದ ನೆಟ್/ಸೆಟ್/ಪಿಚ್.ಡಿ ಪದವಿಯನ್ನು ಹೊಂದುವುದನ್ನು ಕಡ್ಡಾಯಗೊಳಿಸುವುದು ಸೂಕ್ತವಲ್ಲವಾದ್ದರಿಂದ ದಿನಾಂಕ: 29.12.2021 ರಂದು ಆಡಳಿತ ಮಂಡಳಿ ಕೈಗೊಂಡ ನಿರ್ಣಯವನ್ನು ಕಾರ್ಯಗತಗೊಳಿಸಬಾರದು ಹಾಗೂ ಈ ನಾಲ್ಕು ಜನ ಬೋಧಕ ಸಿಬ್ಬಂದಿಗಳ ವೇತನವನ್ನು ಯಜಿಸಿ ಪರಿಷ್ಕೃತ ವೇತನ ಶ್ರೇಣಿಯಲ್ಲಿಯೇ ಮುಂದುವರೆಸುವಂತೆ ಆಗ್ರಹಿಸಿರುತ್ತಾರೆ.

ಆದರೆ, ಪಿಎಚ್.ಡಿ/ನೆಟ್/ಸೆಟ್ ಹೊಂದಿರದ ಸಿಬ್ಬಂದಿಗಳಿಗೆ 2006 ರ ಯುಜಿಸಿ ಪರಿಷ್ಕೃತ ವೇತನ ಶ್ರೇಣಿಯನ್ನು ವಿಸ್ತರಿಸುವ ಬಗ್ಗೆ ಸರ್ಕಾರಿ ಆದೇಶ ಸಂಖ್ಯೆಇಡಿ 37 ಯುಎನ್‌ಇ 2009 ದಿನಾಂಕ. 24.12.2009 ರ

ಮ.ತಿ.ನೋ..

<u>ಕಂಡಿಕೆ ಸಂಖ್ಯೆ.07 ರ ಉಪ ಕಂಡಿಕೆ (viii) & (ix) ರಲ್ಲಿ ಈ ಕೆಳಗಿನಂತೆ ಹೇಳಲಾಗಿರುತ್ತದೆ.</u>

**7. General:**

(viii) As from 11-07-2009 the teaching staffs who have not acquired the qualification prescribed by the UGC are not entitled for availing the benefit of UGC revised scheme unless they acquire NET/SLET/Ph.D. through course work and that no M.Phil shall be recognized thereafter until then they shall continue to be in the pre-revised UGC scale or in the State pay scale, as the case may be.

(ix) In respect of fresh recruitment made after 11-07-2009 through Public Service Commission validly constituted Selection Committees, Boards of Appointment for Universities, teachers who do not possess NET/SLET/Ph.D through course work, shall be on probation for a period of two years and shall acquire NET/SLET/Ph.D through course work for declaration of the period of probation and that they will continue to draw salary in the existing scale of pay only, viz. Rs.8,000-13,500. Failure to acquire NET/SLET/Ph.D through course work will debar them from continuing in the service after the period of probation.

ಈ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ: 29.12.2021 ರಂದು ಆಡಳಿತ ಮಂಡಳಿಯು ಮೇಲಿನಂತೆ ನಿರ್ಣಯ ಕೈಗೊಂಡಿರುತ್ತದೆ. ಆದರೆ, ದಿನಾಂಕ: 20.01.2022 ರಂದು ಅಧ್ಯಕ್ಷರು, ಕರ್ನಾಟಕ ಯುನಿವರ್ಸಿಟಿಸ್ ಕಾನ್‌ಸ್ಟಿಟ್ಯೂಯೆಂಟ್ ಟೀಚರ್ಸ್ ಅಸೋಸಿಯೇಶನ್, ಧಾರವಾಡ ರವರು ಮನವಿ ಸಲ್ಲಿಸಿ, ಸದರ ಆಡಳಿತ ಮಂಡಳಿ ನಿರ್ಣಯವನ್ನು ಕಾರ್ಯಗತಗೊಳಿಸಬಾರದೆಂದು ಹೇಳಿರುತ್ತಾರೆ. ಹಾಗೆಯೆ ಸದರಿ ದಿನಾಂಕ: 21.01.2022 ರ ಮನವಿ ಪತ್ರವನ್ನು ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜ್ಯಪಾಲರ ಕಾರ್ಯಾಲಯ, ರಾಜಭವನ, ಬೆಂಗಳೂರು ಮತ್ತು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬೆಂಗಳೂರು ಇವರಿಗೆ ಸಲ್ಲಿಸಿದ್ದು, ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜ್ಯಪಾಲರ ಕಾರ್ಯಾಲಯ, ರಾಜಭವನ, ಬೆಂಗಳೂರು ಮತ್ತು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬೆಂಗಳೂರು ಇವರ ಪತ್ರ ಕ್ರಮವಾಗಿ ದಿನಾಂಕ:14.02.2022 ದಿನಾಂಕ: 19.02.2022 ರಲ್ಲಿ ಸದರಿ ಬೋಧಕ ಸಿಬ್ಬಂದಿಯವರಿಂದ ಸ್ವೀಕೃತವಾಗಿರುವ ಮೂಲ ಪತ್ರ/ ಕೋರಿಕೆಗಳನ್ನು ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಹಾಗೂ ಸರ್ಕಾರದ ಹಂತದಲ್ಲಿ ಕ್ರಮವಾಗಬೇಕಿದ್ದಲ್ಲಿ ಅಂತಹ ಪ್ರಸ್ತಾವನೆಗಳನ್ನು ನಿಯಮಾನುಸಾರ ಪರಿಶೀಲಿಸಿ ಸರ್ಕಾರಕ್ಕೆ ಸಲ್ಲಿಸುವಂತೆ ನಿರ್ದೇಶಿಸಿರುತ್ತಾರೆ. ಸದರಿ ಮನವಿಯನ್ನು ಪರಿಶೀಲಿಸಲಾಗಿ, ಶ್ರೀ.ಗುರುನಾಥ ಎಂಬುವವರ ಪ್ರಕರಣದಲ್ಲಿ ಮಾನ್ಯ ಉಚ್ಚನ್ಯಾಯಾಲಯ ನೀಡಿದ ದಿನಾಂಕ 11.12.2019 ರ ತೀರ್ಪು ಹಾಗೂ 2016 ರ ಯುಜಿಸಿ ಪತ್ರದಲ್ಲಿನ ಅಂಶಗಳನ್ವಯ ಯುಜಿಸಿ ನಿಯಮಾವಳಿಗಳು ಭವಿಷ್ಯವರ್ತಿಯಾಗಿ ಜಾರಿಗೆ ಬರುತ್ತವೆಯೆಂದು ಹೇಳುತ್ತ ಎಮ್.ಫಿಲ್ ಆಧಾರದ ಮೇಲೆ ನೇಮಕಾತಿ ಮುಂದುವರೆಸುವ ಅಂಶದ ಬಗ್ಗೆ ಒತ್ತು ನೀಡಲಾಗಿದೆ ಹೊರತು ನೆಟ್/ಸ್ಲೆಟ್/ಪಿ.ಎಚ್.ಡಿ ಇಲ್ಲದಿದ್ದಾಗ್ಯೂ 2006 ರ ಯುಜಿಸಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮುಂದುವರೆಸಲು ಇರುವ ನಿಯಮಾವಳಿಗಳ ಬಗ್ಗೆ ಪ್ರಸ್ತಾಪ ಮಾಡಿರುವುದಿಲ್ಲ. ಮುಂದುವರೆದು, ದಿನಾಂಕ: 29.12.2021 ರಂದು ಆಡಳಿತ ಮಂಡಳಿ ಕೈಗೊಂಡ ನಿರ್ಣಯವನ್ನು ಕಾರ್ಯಗತಗೊಳಿಸುವುದಕ್ಕೆ ಈ ಕೆಳಕಂಡ ಕೆಲವು ತಾಂತ್ರಿಕ ಸಮಸ್ಯೆಗಳು ಎದುರಾಗಿದ್ದು, ಅವುಗಳ ಬಗ್ಗೆ ನಿರ್ಧಾರ ಕೈಗೊಳ್ಳಬೇಕಾಗಿರುತ್ತದೆ.

1) ದಿನಾಂಕ: 27.09.2008 ರಂದು ನೇಮಕಾತಿಗಾಗಿ ಹೊರಡಿಸಿದ ಅಧಿಸೂಚನೆಯನ್ನು 2000 ರ ಯುಜಿಸಿ ರೆಗ್ಯುಲೇಶನ್‌ದ ವಿನಿಮಯಗಳ ಆಧಾರದ ಮೇಲೆ ಅಧಿಸೂಚಿಸಲಾಗಿದ್ದು, ಸದರ 2000 ದ ಯುಜಿಸಿ ರೆಗ್ಯೂಲೆಶನ್ ದಲ್ಲಿ ಉಪನ್ಯಾಸಕ ಹುದ್ದೆ ಎಂದಿದ್ದು, ಅದರ ಪ್ರಕಾರವಾಗಿ ಅಧಿಸೂಚನೆ ಕೂಡ **ಉಪನ್ಯಾಸಕ ಹುದ್ದೆಯನ್ನು 1996 ರ <u>ವೇತನ ಶ್ರೇಣಿ ರೂ.8000–275–13500 ಗಳ ವೇತನ ಶ್ರೇಣಿಯಲ್ಲಿ</u>** ಭರ್ತಿ ಮಾಡಿಕೊಳ್ಳಲು ಅಧಿಸೂಚನೆ ಹೊರಡಿಸಲಾಗಿರುತ್ತದೆ. ಆದರೆ, ಇವರನ್ನು ಉಪನ್ಯಾಸಕ ಹುದ್ದೆಗೆ ನೇಮಕ ಮಾಡುವ ಬದಲಾಗಿ, ನೇಮಕಾತಿ ಮಾಡಿ ಆದೇಶ ನೀಡುವ ಸಂದರ್ಭದಲ್ಲಿ ದಿನಾಂಕ: 24.12.2009 ರ ಸರ್ಕಾರದ ಆದೇಶದ ಮೂಲಕ ಜಾರಿಗೆ ಬಂದಿದ್ದ 2006 ರ ಯುಜಿಸಿ ಪರಿಷ್ಕೃತ ವೇತನ ಶ್ರೇಣಿ ಅಡಿಯಲ್ಲಿರುವಂತ **<u>ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ನೇಮಕ ಮಾಡಿ ಅದಕ್ಕೆ ಸಂಬಂಧಿತ ರೂ.15600–39100+ಎಜಿಪಿ.6000 ರ ವೇತನ ಶ್ರೇಣಿಯಲ್ಲಿ ರೂ.21,600/– ಗಳಿಗೆ</u>** ವೇತನ ನಿಗದಿಪಡಿಸಿ ನೇಮಕಾತಿ ಆದೇಶವನ್ನು ನೀಡಲಾಗಿದೆ. ಹೀಗಾಗಿ, ಈಗಾಗಲೇ ವಿಸ್ತರಿಸಿದ 2006 ರ ವೇತನ ಶ್ರೇಣಿಯನ್ನು ಹಿಂಪಡೆದಾದಲ್ಲಿ, ಅವರನ್ನು ಉಪನ್ಯಾಸಕರೆಂದು ಪದನಾಮೀಕರಿಸಬೇಕೆ? ಅಥವಾ ಸಹಾಯಕ ಪ್ರಾಧ್ಯಾಪಕರೆಂದು ಪದನಾಮೀಕರಿಸಬೇಕೆ?

2) 2008–09 ರ ಅವಧಿಯಲ್ಲಿ ನೇಮಕಾತಿ ಅಧಿಸೂಚನೆ ಹೊರಡಿಸಿದ್ದರ ಪ್ರಕಾರವಾಗಿ ಆಯ್ಕೆ ಪ್ರಕ್ರಿಯೆಯು ದಿನಾಂಕ: 11.07.2009 ಕ್ಕಿಂತ ಮುಂಚೆಯೆ ಸಂಪೂರ್ಣಗೊಂಡಿದ್ದು, ಸದರ ನೇಮಕಾತಿ ಅಧಿಸೂಚನೆಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿ ದಾಖಲಾದ **<u>ರಿಟ್ 60507/2009 ರ ಅರ್ಜಿಯು ತಡವಾಗಿ 2011 ರಲ್ಲಿ ವಿಲೇವಾರಿಯಾಗಿದ್ದ</u>** ಹಿನ್ನಲೆಯಿಂದಾಗಿ 2011–2012 ರ ಅವಧಿಯಲ್ಲಿ ನೇಮಕಾತಿ ಆದೇಶಗಳನ್ನು ಜಾರಿ ಮಾಡಲಾಗಿರುತ್ತದೆ. ಹಾಗಾಗಿ ಈ ಸಿಬ್ಬಂದಿಗಳನ್ನು 11.07.2009 ಕ್ಕಿಂತ ಮೊದಲೇ ನೇಮಕಗೊಂಡಿರುವವರೆಂದು ಪರಿಗಣಿಸಬೇಕೆ? ಅಥವಾ 11.07.2009 ರ ನಂತರ ನೇಮಕಗೊಂಡಿರುವವರೆಂದು ಪರಿಗಣಿಸಬೇಕೆ?

ಮು.ಪಿ.ನೋ..

3) ಒಂದು ವೇಳೆ 11.07.2009 ಕ್ಕಿಂತ ಮೊದಲೆ ನೇಮಕಗೊಂಡವರೆಂದು ಪರಿಗಣಿಸಿದ್ದಾದರೆ, ಯಾವ ವೇತನ ಶ್ರೇಣಿಯಲ್ಲಿ ವೇತನ ನಿಗದಿಪಡಿಸಬೇಕು? ಅಂದರೆ, ದಿನಾಂಕ: 24.12.2009 ರ ಸರ್ಕಾರದ ಆದೇಶದ ಕಂಡಿಕೆ ಸಂಖ್ಯೆ.7 ರ ಉಪಕಂಡಿಕೆ ಸಂಖ್ಯೆ.8 ರ ಪ್ರಕಾರ 11.07.2009 ಕ್ಕಿಂತ ಮೊದಲೇ ನೇಮಕಗೊಂಡಿದ್ದಲ್ಲಿ ನೆಟ್/ಸೆಟ್/ಪಿಎಚ್.ಡಿ ಹೊಂದುವವರೆಗೆ ಪರಿಷ್ಕರಣಾ ಪೂರ್ವ ವೇತನ ಶ್ರೇಣಿಯಲ್ಲಿ ವೇತನವನ್ನು ನಿಗದಿಪಡಿಸಬೇಕೆಂದಿದ್ದು, ಆ ಪ್ರಕಾರವಾಗಿ ನಿಗದಿಪಡಿಸಬೇಕೆ?

4) ಈ ಮೇಲಿನಂತೆ ಕ್ರಮಕೈಗೊಂಡಿದ್ದಾದಲ್ಲಿ, ಸದರ 4 ಜನ ಸಿಬ್ಬಂದಿಗಳು ಈಗಾಗಲೇ 2010 ರ ಯುಜಿಸಿ ರೆಗ್ಯುಲೇಶನ್‌ಗಳ ಪ್ರಕಾರ ಸಹಾಯಕ ಪ್ರಾಧ್ಯಾಪಕ (6000 ಎಜಿಪಿ) ದಿಂದ ಸಹಾಯಕ ಪ್ರಾಧ್ಯಾಪಕ (7000 ಎಜಿಪಿ) ಗೆ ಪದೋನ್ನತಿಗೊಂಡಿರುವುದರಿಂದ, ಈಗಾಗಲೇ ನೀಡಿದ ಈ ಪದೋನ್ನತಿಗಳನ್ನು ಯಾವ ರೀತಿ ಮರುನಿಗದಿಪಡಿಸಬೇಕು?

5) ಹಾಗೆಯೇ, ಸದರ 4 ಜನ ಸಿಬ್ಬಂದಿಗಳ ವೇತನವನ್ನು ಮರುನಿಗದಿಪಡಿಸುವುದರಿಂದ ಉಂಟಾಗುವ ವೇತನ ವ್ಯತ್ಯಾಸದ ಮೊತ್ತವನ್ನು ವಸೂಲಿಸುವ ಬಗ್ಗೆ ಯಾವ ರೀತಿ ಅಂದರೆ ಕಂತುಗಳಲ್ಲಿ/ಸಮಾನ ಕಂತುಗಳಲ್ಲಿ ವಸೂಲಾತಿಗೆ ಕ್ರಮವಹಿಸಬೇಕು ?

ಏತನ್ಮಧ್ಯೆ, ಬೋಧಕ ಸಿಬ್ಬಂದಿಗಳಾದ ಶ್ರೀಮತಿ.ಜ್ಯೋತಿ.ಎಸ್.ದೊಡ್ಡಮನಿ, ಡಾ.(ಶ್ರೀಮತಿ).ಗೀತಾ.ಎಸ್.ಚವ್ಹಾಣ, ಶ್ರೀಮತಿ.ನಿರೂಪಮಾ. ಜೆ.ಎಮ್., ಶ್ರೀ.ಎಚ್.ಡಿ.ನೀಲಗುಂದ ಇವರು ತಮ್ಮ ಪತ್ರ ದಿನಾಂಕ: 31.03.2022 ರ ಜೊತೆಗೆ ಲಗತ್ತಿಸಿದ ಧಾರವಾಡದ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 14.02.2022 ರಲ್ಲಿ ನೀಡಿದ ತೀರ್ಪಿನ (WRIT PETITION No. 100610 of 2022 (S-RES) ರಲ್ಲಿ ಮಧ್ಯಂತರ ತಡೆಯಾಜ್ಞೆಯ ಆದೇಶ ಈ ಕೆಳಗಿನಂತೆ ಇರುತ್ತದೆ.

**ORDER**

**" The learned counsel Shri. K. L. Patil is directed to accept notice for respondents.**

**Office objections regarding furnishing of typed copy of Annexures- AA, AC, AD is dispensed with.**

**Interim stay of Annexure- Ah till the next date of hearing.**

**List this writ petition for Preliminary Hearing."**

ಎಮ್.ಫಿಲ್ ಪದವಿಯ ಆಧಾರದ ಮೇಲೆ ನೇಮಕಗೊಂಡ ನೆಟ್/ಸ್ಲೆಟ್/ಪಿಹೆಚ್‌ಡಿ ವಿದ್ಯಾರ್ಹತೆಯನ್ನು ಹೊಂದದೆ ಇರುವ ನಾಲ್ಕು ಜನ ಬೋಧಕ ಸಿಬ್ಬಂದಿಗಳಾದ ಶ್ರೀಮತಿ.ಜ್ಯೋತಿ.ಎಸ್.ದೊಡ್ಡಮನಿ, ಡಾ.(ಶ್ರೀಮತಿ).ಗೀತಾ.ಎಸ್.ಚವ್ಹಾಣ, ಶ್ರೀಮತಿ.ನಿರೂಪಮಾ. ಜೆ.ಎಮ್., ಶ್ರೀ.ಎಚ್.ಡಿ.ನೀಲಗುಂದ ಇವರುಗಳ ಪ್ರಕರಣದಲ್ಲಿ ಮುಂದಿನ ಕ್ರಮಜರುಗಿಸುವುದಕ್ಕೆ ಎದುರಾದ ಈ ಮೇಲ್ಕಂಡ ತಾಂತ್ರಿಕ ಸಮಸ್ಯೆಗಳ ಬಗ್ಗೆ ನಿರ್ಧಾರ ಕೈಗೊಳ್ಳುವ ಸಂಬಂಧ ಹಾಗೂ ಸದರ 4 ಜನ ಬೋಧಕ ಸಿಬ್ಬಂದಿಯವರು ತಮ್ಮ ಪತ್ರ ದಿನಾಂಕ: 31.03.2022 ರ ಜೊತೆಗೆ ಲಗತ್ತಿಸಿದ ಧಾರವಾಡದ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 14.02.2022 ರಂದು (WRIT PETITION No. 100610 of 2022 (S-RES) ನೀಡಿದ ಮಧ್ಯಂತರ ತಡೆಯಾಜ್ಞೆಯ ಆದೇಶವನ್ನು ಆಡಳಿತ ಮಂಡಳಿ ಸಭೆಯ ಪರಿಶೀಲನೆ ಹಾಗೂ ಅವಗಾಹನೆಗಾಗಿ ಮಂಡಿಸಲಾಗಿತ್ತು ಸದರ ಆಡಳಿತ ಮಂಡಳಿ ಸಭೆಯು ಈ ಕೆಳಗಿನಂತೆ ನಿರ್ಣಯಿಸಿರುತ್ತದೆ.

ಆಡಳಿತ ಮಂಡಳಿ ನಿರ್ಣಯ ಸಂಖ್ಯೆ 04, ದಿನಾಂಕ: 24.06.2022.

"ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ವ್ಯಕ್ತಪಡಿಸಿದ ಆಕ್ಷೇಪಣೆ ಹಿನ್ನೆಲೆಯಲ್ಲಿ, ಯುಜಿಸಿ ನಿಗದಿಪಡಿಸಿದ ನೆಟ್/ಸೆಟ್/ಪಿಎಚ್.ಡಿ. ವಿದ್ಯಾರ್ಹತೆಯನ್ನು ಹೊಂದದಿರುವ 04 ಜನ ಬೋಧಕ ಸಿಬ್ಬಂದಿಗಳ ಪ್ರಕರಣದಲ್ಲಿ ಮುಂದಿನ ಕ್ರಮ ಜರುಗಿಸುವುದಕ್ಕೆ ಎದುರಾದ ತಾಂತ್ರಿಕ ಸಮಸ್ಯೆಗಳ ಬಗ್ಗೆ ಹಾಗೂ ಬೋಧಕ ಸಿಬ್ಬಂದಿಗಳಾದ ಶ್ರೀಮತಿ.ಜ್ಯೋತಿ. ಎಸ್. ದೊಡಮನಿ, ಡಾ.(ಶ್ರೀಮತಿ). ಗೀತಾ. ಎಸ್. ಚವ್ಹಾಣ, ಶ್ರೀಮತಿ. ನಿರೂಪಮಾ. ಜೆ. ಎಮ್., ಶ್ರೀ. ಎಚ್.ಡಿ. ನೀಲಗುಂದ ಇವರು ತಮ್ಮ ಪತ್ರ ದಿನಾಂಕ 31.03.2022 ರ ಜೊತೆಗೆ ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಪೀಠ, ಧಾರವಾಡದಲ್ಲಿ ದಾಖಲಿಸಿದ **W. P. No. 100610 of 2022**

ಮು.ಪು.ನೋ..

S-RES ರಲ್ಲಿ ಆಡಳಿತ ಮಂಡಳಿ ಠರಾವು ಸಂಖ್ಯೆ 10 ದಿನಾಂಕ 29.12.2021 ರ (KU-Sundicate/Proceedings-15/2021-2022/A-33 ದಿನಾಂಕ 04.01.2022) ರ ನಿರ್ಣಯಕ್ಕೆ ತಂದ ತಡೆಯಾಜ್ಞೆಯನ್ನು ಪರಿಶೀಲಿಸಿದ ಸಿಂಡಿಕೇಟ ಸಭೆಯು ಪ್ರಸ್ತುತ ಮೇಲ್ಕಾಣಿಸಿದ ಆಡಳಿತ ಮಂಡಳಿಯ ನಿರ್ಣಯಕ್ಕೆ ಕಾರ್ಯಗತಗೊಳಿಸದೇ ಸ್ಥಗಿತದಲ್ಲಿರಿಸಲು ಮತ್ತು ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮವಹಿಸಬೇಕೆಂದು ತೀರ್ಮಾನಿಸಿತು."

ಸದರ ಮಾನ್ಯ ಉಚ್ಚ ನ್ಯಾಯಾಲಯದ ತಡೆಯಾಜ್ಞೆ ಆದೇಶದಂತೆ ಮತ್ತು ಮೇಲ್ಕಾಣಿಸಿದ ಆಡಳಿತ ಮಂಡಳಿ ನಿರ್ಣಯದಂತೆ ದಿನಾಂಕ: 04.01.2022 ರ ಆಡಳಿತ ಮಂಡಳಿ ನಿರ್ಣಯದ ನಡುವಳಿಯನ್ನು ಕಾರ್ಯಗತಗೊಳಿಸದೇ ಸ್ಥಗಿತದಲ್ಲಿರಿಸಲಾಗಿರುತ್ತದೆ.

ತದ ನಂತರ ಸದರಿ ಮೇಲ್ಕಾಣಿಸಿದ ನಾಲ್ಕು ಜನ ಬೋಧಕ ಸಿಬ್ಬಂದಿಗಳು ಸಲ್ಲಿಸಿದ ರಿಟ್ ಅರ್ಜಿ ಸಂಖ್ಯೆ 100610 of 2022 (S-RES) ನ್ನು ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಪೀಠವು ವಿಚಾರಣೆಯನ್ನು ಕೈಗೆತ್ತಿಕೊಂಡು ದಿನಾಂಕ: 12.06.2023 ರಂದು ತನ್ನ ಅಂತಿಮ ಆದೇಶವನ್ನು ಈ ಕೆಳಗಿನಂತೆ ನೀಡಿರುತ್ತದೆ.

**ORDER**

Writ petition is partly allowed

The impugned decision at Annexure- Ah dated 04.01.2022 issued by the syndicate of respondent Nos. 1 and 2 is quashed.

Since the decision at Annexure- Ah is only a recommendation, the question of issuing writ of mandams as sought for by the petitioner, dose arise for consideration.

At this stage, learned counsel for the petitioners submits that having regard to the pendency of this writ petition, promotion of the petitioners is withheld. It is needless to state that if the petitioners are otherwise eligible for promotion, respondents shall consider their case in accordence with law.

ಮುಂದುವರೆದು ಸದರ ನಾಲ್ಕು ಜನ ಬೋಧಕ ಸಿಬ್ಬಂದಿಗಳ ಪೈಕಿ 1. ಡಾ(ಶ್ರೀಮತಿ) ಗೀತಾ ಎನ್ ಚವ್ಹಾಣ, 2. ಡಾ. ಹರ್ಷಾ ಡಿ ನೀಲಗುಂದ ಮತ್ತು 3. ಶ್ರೀಮತಿ. ಜ್ಯೋತಿ ಎಸ್ ದೊಡ್ಡಮನಿ ಇವರುಗಳು ತಮ್ಮ ವಿನಂತಿ ಪತ್ರ ದಿನಾಂಕ: 27.06.2023 ಮತ್ತು 28.06.2023 ರ ಮೂಲಕ ಸದರ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಪೀಠವು ದಿನಾಂಕ: 12.06.2023 ರಂದು ನೀಡಿರುವ ಆದೇಶದ ಪ್ರತಿಯನ್ನು ಲಗತ್ತಿಸಿ ದಿನಾಂಕ:04.01.2022 ರ ಆಡಳಿತ ಮಂಡಳಿಯ ನಿರ್ಣಯದ ನಡುವಳಿಗಳನ್ನು ರದ್ದುಪಡಿಸಿರುವುದಾಗಿ ತಿಳಿಸಿ ತಮಗೆ ಸಿಗಬೇಕಾದಂತಹ ಸೇವಾ ಸೌಲಭ್ಯ ಮತ್ತು ಪದೋನ್ನತಿ ನೀಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

ಆದುದರಿಂದ ಎಮ್ ಫಿಲ್ ಪದವಿಯ ಆಧಾರದ ಮೇಲೆ ನೇಮಕಗೊಂಡ 04 ಜನ ಬೋಧಕ ಸಿಬ್ಬಂದಿಗಳಾದ ಶ್ರೀಮತಿ. ಜ್ಯೋತಿ. ಎಸ್. ದೊಡ್ಡಮನಿ, ಡಾ. (ಶ್ರೀಮತಿ) ಗೀತಾ ಎನ್. ಚವ್ಹಾಣ, ಡಾ. ಹರ್ಷಾ ಡಿ ನೀಲಗುಂದ, ಡಾ. (ಶ್ರೀಮತಿ) ನಿರುಪಮಾ ಜೆ. ಎಮ್ ಇವರುಗಳು ಯುಜಿಸಿ ನಿಗದಿಪಡಿಸಿದ ನೆಟ್/ಸೆಟ್/ಪಿಎಚ್.ಡಿ. ವಿದ್ಯಾರ್ಹತೆಯನ್ನು ಹೊಂದದೇ ಇರುವ ಪ್ರಯುಕ್ತ ಭಾರತದ ಲೆಕ್ಕ ನಿಯಂತ್ರಕರು ಮತ್ತು

ಮು.ತಿ.ನೋ..

ಮಹಾಲೆಕ್ಕಪರಿಶೋಧಕರು ಇವರು ವ್ಯಕ್ತಪಡಿಸಿದ ಆಕ್ಷೇಪಣೆ ಹಿನ್ನೆಲೆಯಲ್ಲಿ ಸದರ ಪ್ರಕರಣಕ್ಕೆ ಸಂಬಂಧಿಸಿದಂತೆ ಸದರ ಬೋಧಕ ಸಿಬ್ಬಂದಿಯವರು ದಾಖಲಿಸಿದ WRIT PETITION No. 100610 of 2022 (S-RES) ರ ಕುರಿತಂತೆ ದಿನಾಂಕ: 12.06.2023 ರಂದು ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಪೀಠವು ನೀಡಿರುವ ಅಂತಿಮ ಆದೇಶವನ್ನು ಆಡಳಿತ ಮಂಡಳಿಯ ಅವಗಾಹನೆಗಾಗಿ ಹಾಗೂ ಪರಿಶೀಲನೆಗಾಗಿ ಮಂಡಿಸಲಾಗಿದೆ.